ಸಂಪುಟ: 11 ಸಂಚಿಕೆ:07 ದಿನಾಂಕ: ಏಪ್ರಿಲ್ 11 2016 

# ಮಾಧ್ಯಮ ಮಂಗಳ

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ



ಕರ್ನಾಟಕದ ದಕ್ಷಿಣಗಂಗೆ ಕಾವೇರಿ

ಪುಟ: 2



ಸದ್ದಿಲ್ಲದ ಕಡಲತಡಿಯ ಹೆಜ್ಜೆಗಳು

ಪುಟ: 3



ದಕ್ಷಿಣ ಭಾರತ ಕಂಡ ಯಶಸ್ವಿ ನಟ ಮತ್ತು ಜನಪದ ಗಾಯಕ ಮಣಿ

ಪುಟ:4

## ಡಿಜಿಟಲ್ ತಂತ್ರಜ್ಞಾನ ದೇಶದ ಔದ್ಯಮಿಕ ಅಭಿವೃದ್ಧಿಗೆ ಸಹಕಾರಿ: ಡಾ.ಸಾರಸ್ವತ್

**ಮಂಗಳಗಂಗೋತ್ರಿ, ಮಾ.30:** ಡಿಜಿಟಲ್ ತಂತ್ರಜ್ಞಾನವು ದೇಶದ ಪ್ರಸ್ತುತ ಅವಶ್ಯಕತೆಯಾಗಿದ್ದು, ಶಿಕ್ಷಣ, ಉದ್ಯೋಗ ಔದ್ಯಮಿಕ ಕ್ಷೇತ್ರಗಳಲ್ಲಿ ಅಗಾಧ ಅವಕಾಶಗಳನ್ನು ಸೃಷ್ಟಿಸುವ ಮೂಲಕ ದೇಶದ ಅಭಿವೃದ್ಧಿ ಕಾರ್ಯಗತವಾಗಲು ಸಹಕಾರಿಯಾಗಲಿದೆ ಎಂದು ಕೇಂದ್ರ ನೀತಿ ಅಯೋಗದ ಸದಸ್ಯ ಡಾ.ವಿಜಯ್ ಕುಮಾರ್ ಸಾರಸ್ವತ್ ಅಭಿಪ್ರಯಪಟ್ಟಿದ್ದಾರೆ.

ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳಾ ಸಭಾಂಗಣದಲ್ಲಿ ಬುಧುವಾರದಂದು ನಡೆದ 34ನೇ ವಾರ್ಷಿಕ ಘಟಿಕೋತ್ಸವದಲ್ಲಿ ಅವರು ಪ್ರಧಾನ ಭಾಷಣ ಮಾಡಿದರು

ಕೇಂದ್ರ ಸರ್ಕಾರದ ಡಿಜಿಟಲ್ ಇಂಡಿಯಾ ಕಾರ್ಯಕ್ರಮದ ಮೂಲಕ ದೇಶವು 2018ರ ಅಂತ್ಯದೊಳಗೆ ಮುಂದುವರಿದ ಡಿಜಿಟಲ್ ಆರ್ಥಿಕ ದೇಶವಾಗಿ ಹೊರಹೊಮ್ಮಲಿದೆ. 2019ರ ವೇಳೆಗೆ 2.5 ಲಕ್ಷ ಹಳ್ಳಿಗಳು ಬ್ರಾಡ್ ಬ್ಯಾಂಡ್ ಸೌಲಭ್ಯಗಳನ್ನು ಪಡೆದುಕೊಳ್ಳಲಿವೆ. 4 ಲಕ್ಷ ಸಾರ್ವಜನಿಕ ಇಂಟರ್ ನೆಟ್ ಬಳಕೆಯ ಕೇಂದ್ರಗಳು ತೆರೆಯಲಿವೆ. ಐಟಿ ಕ್ಷೇತ್ರದಲ್ಲಿ 1.7 ಕೋಟಿಗೂ ಹೆಚ್ಚು ಮಂದಿ ನೇರ ಉದ್ಯೋಗ ಪಡೆಯಲಿದ್ದು. 8.5 ಲಕ್ಷ ಮಂದಿ ಪರೋಕ್ಷವಾಗಿ ಉದ್ಯೋಗ ಪಡೆದುಕೊಳ್ಳಲಿದ್ದಾರೆ. ಇದಕ್ಕೆ ಪೂರಕವಾಗಿ ಅಗಾಧ ಸಂಖ್ಯೆಯ ವಿದ್ಯಾರ್ಥಿಗಳು ಡಿಜಿಟಲ್ ಇನ್ಫಾರ್ಮೇಶನ್ ಕಂಪ್ಯೂಟರ್ ಸಯನ್ಸ್ ವಿಷಯಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ ಎಂದು ಸಾರಸ್ವತ್ ಹೇಳಿದರು.



2050ರ ವೇಳೆಗೆ ದೇಶದ ನಗರವಾಸಿಗಳ ಸಂಖ್ಯೆ ಅರ್ಧಕ್ಕಿಂತಲೂ ಹೆಚ್ಚಾಗಲಿದೆ. ಒಟ್ಟು ದೇಶೀಯ ಉತ್ಪನ್ನಗಳ ತಯಾರಿಕಾ ಪಾಲುದಾರಿಕೆಯಲ್ಲಿ ನಗರ ಪ್ರದೇಶಗಳ ಪ್ರಮಾಣ ಈಗ ಶೇ.75ಕ್ಕಿಂತ ಹೆಚ್ಚಾಗಲಿದೆ. ಆದ್ದರಿಂದ ಹೆಚ್ಚು ನಗರಗಳನ್ನು ನಿರ್ಮಾಣ ಮಾಡುವುದು ಅಥವಾ ಹಳ್ಳಿಗಳನ್ನು ಉನ್ನತೀಕರ–ಣಗೊಳಿಸುವ ಅಗತ್ಯ ಇರುವುದರಿಂದ ನೂರಕ್ಕೂ ಹೆಚ್ಚು ನಗರಗಳನ್ನು ಸ್ಯಾಟಲೈಟ್ ಪಟ್ಟಣಗಳನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಹೆಜ್ಜೆಯಿಟ್ಟಿದೆ, ಅಲ್ಲದೆ ಮಧ್ಯಮ ಗಾತ್ರದ ಪಟ್ಟಣಗಳನ್ನು ಆಧುನಿಕರ–ಣಗೊಳಿಸುವ ಉದ್ದೇಶವನ್ನೂ ಹೊಂದಿದೆ, ಇವೆಲ್ಲದಕ್ಕೂ ಡಿಜಿಟಲ್ ತಂತ್ರಜ್ಞಾನದ ಅಭಿವೃದ್ಧಿ ಪೂರಕವಾಗಲಿದೆ ಎಂದು ಅವರು ಹೇಳಿದರು.

ವಿಶ್ವವಿದ್ಯಾನಿಲಯದ ಉಪಕುಲಪತಿ ಪ್ರೊ.ಕೆ.ಬೈರಪ್ಪ ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ವಿವಿಧ ದೇಶಗಳ 110 ವಿದ್ಯಾರ್ಥಿಗಳು ವ್ಯಾಸಂಗ ನಡೆಸುತ್ತಿದ್ದಾರೆ. ಕೊಡಗಿನ ಚಿಕ್ಕಳುವಾರದಲ್ಲಿ ಹಲವು ಸ್ನಾತಕೋತ್ತರ ಕೋರ್ಸ್‌ಗಳನ್ನು ಈಗಾಗಲೇ ಆರಂಭಿಸಲಾಗಿದ್ದು, ಮುಂದಿನ ವರ್ಷ ಇನ್ನಷ್ಟು ಕೋರ್ಸ್‌ಗಳನ್ನು ಪರಿಚಯಿಸಲಾಗುವುದು. ವಿಶ್ವಾವಿದ್ಯಾನಿಲಯದ 3 ಕೋಟಿ ರೂಗಳಿಗೂ ಅಧಿಕ ವೆಚ್ಚದ 88 ಸಂಶೋಧನಾ ಪ್ರಾಜೆಕ್ಟ್‌ಗಳು ಪ್ರಗತಿಯಲ್ಲವೆ ಎಂದು ಮಾಹಿತಿ ನೀಡಿದರು.

ಘಟಿಕೋತ್ಸವದಲ್ಲಿ ಮೂವರು ಗಣ್ಯರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ಉನ್ನತ ಶಿಕ್ಷಣ ಸಚಿವ ಟಿ.ಬಿ.ಜಯಚಂದ್ರ ಪ್ರಧಾನ ಮಾಡಿದರು. ಸಾಹಿತ್ಯ ಕ್ಷೇತ್ರದಲ್ಲಿ ಹಿರಿಯ ಸಾಹಿತಿ ಎಸ್.ಎಲ್. ಬೈರಪ್ಪ, ವೈದ್ಯಕೀಯ ಕ್ಷೇತ್ರದಲ್ಲಿ ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್, ಸಮಾಜ ಸೇವಾ ಕ್ಷೇತ್ರದಲ್ಲಿ ಎ.ಜೆ. ಸಮೂಹ ಸಂಸ್ಥೆಗಲ ಅಧ್ಯಕ್ಷ ಎ.ಜೆ.ಶೆಟ್ಟಿ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

ಬಳಿಕ 55 ಮಂದಿಗೆ ಡಾಕ್ಟರೇಟ್ ಪದವಿ, 39 ಮಂದಿ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಮತ್ತು 72 ಮಂದಿಗೆ ನಗದು ಬಹುಮಾನ ನೀಡಲಾಯಿತು. ಒಟ್ಟು 240 ರ್‍ಯಾಂಕ್‌ಗಳಿಸಿದ 59 ಮಂದಿಗೆ ಪ್ರಮಾಣಪತ್ರ ವಿತರಿಸಲಾಯಿತು.

ರಾಜ್ಯ ಉನ್ನತಶಿಕ್ಷಣ ಸಚಿವ ಟಿ.ಬಿ.ಜಯಚಂದ್ರ, ಕುಲಸಚಿವ ಪ್ರೊ.ಟಿ.ಡಿ.ಕೆಂಪರಾಜು, ಪರೀಕ್ಷಾಂಗ ಕುಲಸಚಿವ ಡಾ.ಎ.ಎಂ, ಖಾನ್, ಸಿಂಡಿಕೇಟ್ ಸದಸ್ಯರು ಪಾಲ್ಗೊಂಡಿದ್ದರು.

## ಕ್ರೀಡೆ, ಸಾಂಸ್ಕೃತಿಕ ಕ್ಷೇತ್ರದ ಸಾಧಕರಿಗೆ ಸನ್ಮಾನ

**ಮಂಗಳಗಂಗೋತ್ರಿ:** ಮನುಷ್ಯ ಜಗತ್ತಿಗೆ ಬರುವಾಗ ಇದ್ದ ಸ್ಥಿತಿಯಿಂದ ಇಲ್ಲಿಂದ ಹೋಗುವ ಉತ್ಕ್ರಷ್ಟ ಸ್ಥಿತಿಯಲ್ಲಿ ಬಿಟ್ಟು ಹೋಗುವುದು ಮಾನವ ಧರ್ಮ. ಕರಾವಳಿಯ ಜನ ತುಳು ಎನ್ನುವ ಪುಟ್ಟ ಭಾಷೆಯನ್ನು ಅವಕಾಶ ಸಿಕ್ಕಾಗಲೆಲ್ಲ ಬಳಸಿ ವಿಶ್ವದ ಭೂಪಟದಲ್ಲಿ ಇಲ್ಲಿನ ಸಂಸ್ಕ್ರತಿಯನ್ನು ಸೇರಿಸಿದ್ದು ಕನ್ನಡಿಗರಿಗೆ ಹೆಮ್ಮೆಯ ವಿಚಾರ ಎಂದು ಮಂಗಳೂರು ವಿವಿಯ ಹಳೆ ವಿದ್ಯಾರ್ಥಿ, ಮೈಸೂರು ಸಂತ ಫಿಲೋಮಿನಾ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ.ಕೃಷ್ಣೇ ಗೌಡ ಅಭಿಪ್ರಾಯಪಟ್ಟರು.




ಮಂಗಳೂರು ವಿವಿಯ ಮಂಗಳಾ ಆಡಿಟೋರಿಯಂನಲ್ಲಿ ಇತ್ತೀಚೆಗೆ ನಡೆದ ಕ್ರೀಡೆ ಮತ್ತು ಸಾಂಸ್ಕ್ರತಿಕ ಕ್ಷೇತ್ರದಲ್ಲಿ ಅಂತರ್ ವಿವಿ ಮಟ್ಟದಲ್ಲಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸುವ 'ದರ್ಪಣ–2016' ಕಾರ್ಯಕ್ರಮದಲ್ಲಿ ಮಾತನಾಡಿದರು.

ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಹೇಳಲು ಪದಗಳು ಸಾಲದು. ಪ್ರತಿಯೊಂದು ರಂಗದಲ್ಲಿ ಅದ್ಭುತವನ್ನೇ ಸಾಧಸಿರುವ ಉಪನ್ಯಾಸಕರಿಗಿಂತಲೂ ನಿರೂಪಕರೇ ಮಿಗಿಲಾಗಿ ಕಾಣುವ ಮಂಗಳೂರು, ಮಂಗಳಗಂಗೋತ್ರಿ ವಿವಿ ದೇಶಕ್ಕೆ ಅತ್ಯಮೂಲ್ಯ ಕಾಣಿಕೆ ನೀಡಿದೆ ಎಂದು ನುಡಿದರು.

ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಎಂ. ಮೋಹನ್ ಆಳ್ವ ಮಾತನಾಡಿ, 5ಕೋಟಿ ವಿದ್ಯಾರ್ಥಿಗಳ ನಡುವೆ ರಾಷ್ಟ್ರೀಯ ದಾಖಲೆ ಬರೆಯುವ ಸ್ಪರ್ಧಿಯ ಸಾಧನೆ ನಿಜಕ್ಕೂ ಶ್ರೇಷ್ಟವಾದದ್ದು. ವಿವಿಗಳಲ್ಲಿ ರ್‍ಯಾಂಕ್ ಪಡೆಯುವುದು ಅದು ಕೇವಲ ವಿವಿಗೆ ಸೀಮಿತವಾದರೆ ರಾಷ್ಟ್ರಮಟ್ಟದ ದಾಖಲೆ ಬರೆಯಲು ದೇಶೀಯ ಮಟ್ಟದಲ್ಲಿ ಮಿಂಚಬೇಕಾದರೆ ಕಠಿಣ ಪರಿಶ್ರಮವೂ ಅಗತ್ಯ. ಆ ದಿಸೆಯಲ್ಲಿ ರ್‍ಯಾಂಕ್ ವಿಜೇತ ವಿದ್ಯಾರ್ಥಿಗೆ ಹೋಲಿಸಿದರೆ ರಾಷ್ಟ್ರಮಟ್ಟದ ದಾಖಲೆ ಮಾಡುವ ವಿದ್ಯಾರ್ಥಿ ಉನ್ನತ ಸಾಲಿನಲ್ಲಿ ಕಾಣುತ್ತಾನೆ ಎಂದರು.

ಭಾರತೀಯ ಹಾಕಿ ತಂಡದ ಮಾಜಿ ಕ್ಯಾಪ್ಟನ್ ಅರ್ಜುನ ಪ್ರಶಸ್ತಿ ಪುರಸ್ಕೃತ ಅರ್ಜುನ್ ಹಾಲಪ್ಪ ಕಾರ್ಯಕ್ರಮ ಉದ್ಘಾಟಿಸಿದರು. ಮಂಗಳೂರು ವಿವಿ ಉಪಕುಲಪತಿ ಡಾ. ಕೆ.ಬೈರಪ್ಪ ಅಧ್ಯಕ್ಷತೆ ವಹಿಸಿದ್ದರು. ರಾಷ್ಟ್ರೀಯ ಕಬ್ಬಡಿ ತಂಡದ ಆಟಗಾರ ಸುಖೇಶ್ ಹೆಗ್ಡೆ, ಪುಣೇರಿ ಪಲ್ಟನ್ ತಂಡದ ಪ್ರತಿನಿಧಿ ಸಚಿನ್ ಸುವರ್ಣ, ಡಾ.ಉದಯ, ಮಂಗಳೂರು ವಿವಿಯ ದೈಹಿಕ ಶಿಕ್ಷನ ನಿರ್ದೇಶಕ ಡಾ. ಸಿ.ಕೆ ಕಿಶೋರ್ ಕುಮಾರ್, ಸಹಾಯಕ ಡಾ.ಪ್ರಸನ್ನ ಪಿ.ಕೆ, ರಮೇಶ್ ಎಚ್.ಎಂ, ಗಿರೀಶ್‌ದಾಸ್ ಕೂಳೂರು ಉಪಸ್ಥಿತರಿದ್ದರು.

## ಪರ್ಯಾಯ ಸಂಸ್ಕೃತಿಯ ಬೆಳವಣಿಗೆಯಲ್ಲಿ ಕನಕದಾಸರ ಪಾತ್ರ ಕೂಡಾ ಅಪಾರ

**ಮಂಗಳಗಂಗೋತ್ರಿ, ಮಾ.17:** ದೇಶದಲ್ಲಿ ಹಿಂದಿನಿಂದಲೂ ಜಾತಿ, ಅಧಿಕಾರ, ಶೋಷಣೆಯ ವಿರುದ್ಧ ಸಂಘರ್ಷಗಳು ನಡೆದಿರುವುದನ್ನು ಗಮನಿಸಬಹುದಾಗಿದೆ. ಸುಮಾರು 12ನೇ ಶತಮಾನದಲ್ಲಿ ಶೋಷಣೆಗಳ ವಿರುದ್ಧ ಧ್ವನಿ ಕೇಳಿ ಬಂದು ವಚನಕಾರರ ಮೂಲಕ ಪರ್ಯಾಯ ಸಂಸ್ಕ್ರತಿಯು ಬೆಳವಣಿಗೆಗೊಂಡಿತ್ತು. ಇಂತಹ ಪರ್ಯಾಯ ಸಂಸ್ಕ್ರತಿಯ ಬೆಳವಣಿಗೆಯಲ್ಲಿ ಕನಕದಾಸರ ಪಾತ್ರ ಕೂಡಾ ಅಪಾರ ಎಂದು ಪತ್ರಕರ್ತೆ ಡಾ. ಆರ್.ಪೂರ್ಣಿಮಾ ಅಭಿಪ್ರಾಯಪಟ್ಟರು.



ಮಂಗಳೂರು ವಿಶ್ವವಿದ್ಯಾನಿಲಯದ ಕನಕದಾಸ ಸಂಶೋಧನಾ ಕೇಂದ್ರದ ಆಶ್ರಯದಲ್ಲಿ ವಿವಿಯ ಹಳೆ ಸೆನೆಟ್ ಸಭಾಂಗಣದಲ್ಲಿ ಇತ್ತೀಚೆಗೆ ನಡೆದ 'ಕನಕ ಗಂಗೋತ್ರಿ' ಕನಕದಾಸರ ಕೀರ್ತನ ಗಾಯನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕರ್ನಾಟಕ ಕರವಾಳಿ ಭಾಗ ಹಿಂದಿನಂತೆ ಉಳಿದಿಲ್ಲ ಎಂಬುದು ಆತಂಕದ ವಿಷಯವಾಗಿದ್ದು ಆ ದಿಸೆಯಲ್ಲಿ ಕನಕದಾಸರ ನೆನಪು ಮತ್ತು ಅವರ ಚಿಂತನೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕೆಲಸ ಅಗತ್ಯವಾಗಿ ಮಾಡಬೇಕಿದೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಮಂಗಳೂರು ವಿವಿ ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗದ ನಿರ್ದೇಶಕ ಡಾ. ಉದಯ ಬಾರ್ಕೂರು, ಕನಕದಾಸರು ಕೀರ್ತನೆಯ ಮೂಲಕ ಸಮಾಜದ ಪರಿವರ್ತನೆಗಾಗಿ ಮೌನ ಕ್ರಾಂತಿಯ ಮೂಲಕ ಹೋರಾಡಿದ ಮಹಾನುಭವರು.

ಮೂರನೇ ಪುಟಕ್ಕೆ....

## ಸಂಪಾದಕೀಯ

# ಬರ ತತ್ತರ

ದಾಹ, ದಾಹ, ದಾಹ,... ಎಲ್ಲಿ ನೋಡಿದಲ್ಲಿ ದಾಹ ಒಂದು ಹನಿ ನೀರಿಲ್ಲದೆ ಇಂದು ಪರದಾಡುವ ಪರಿಸ್ಥಿತಿ ಎದುರಾಗಿದೆ, ಜಲದ ತವರೂರು ಎಂದು ಪ್ರಸಿದ್ಧಿಯಾಗಿದ್ದ, ಕರಾವಳಿ ಪ್ರದೇಶ ಮಂಗಳೂರಲ್ಲೇ ಎರಡು ದಿನಕೊಮ್ಮೆ ನೀರು ಬರುವುದೆಂದರೆ ಇನ್ನು ಉಳಿದ ಬಯಲುಸೀಮೆಯ ಪರಿಸ್ಥಿತಿ ನೆನೆದರೆ ಏನಾಗಬೇಡ, ಈ ವರ್ಷವಂತು ತೀರಾ ವಿಪರೀತ ಬರ ಎಂದಾಗಿದೆ, ಕಳೆದ ನೂರಾರು ವರ್ಷಗಳಿಗಿಂತಲೂ ಗರಿಷ್ಠ ತಾಪಮಾನ ದಾಖಲಾಗಿದೆ, ತಾಪಮಾನಕ್ಕೆ ಬಲಿಯಾಗುವವರ ಸಂಖ್ಯೆ ಏರುತ್ತಲೇ ಇದೆ. ಮನುಷ್ಯರಿಗೆ ಕುಡಿಯುವ ನೀರಿಲ್ಲದೆ ಇನ್ನೂ ಪ್ರಾಣಿಪಕ್ಷಿಗಳಿಗಳ ಗತಿಯೇನು, ಮಂಗಳೂರಿನಲ್ಲಿ ಹಿಂದೆಂದೂ ಕಾಣದ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ, ಜಲ ಸಂಪನ್ಮೂಲ ಪ್ರದೇಶವಾದ ಮಂಳೂರಿನಲ್ಲಿ ಈ ವರ್ಷ ಕುಡಿಯುವ ನೀರಿಗಾಗಿ ಎರಡು ದಿನ ಕಾಯುವುದಾಗಿದೆ ಇದನ್ನು ಗಮನಿಸಿದಾಗ ಉತ್ತರ ಭಾರತ ಅಥವಾ ಉತ್ತರ ಕರ್ನಾಟಕವನ್ನು ಅವಲೋಕನ ಮಾಡಿದರೆ ಮನಸ್ಸು ಜಲ್ಲೆನ್ನುವುದು, ಯಾಕೆಂದರೆ ಮೊದಲೇ ಬಯಲು ಸೀಮೆಯಲ್ಲಿ ಮಳೆಗಾಲದಲ್ಲೂ ನೀರಿನ ಅಭಾವ ಇರುವುದನ್ನು ಕಂಡಿದ್ದೇವೆ ಇನ್ನೂ ಬೇಸಿಗೆ ಕಾಲದಲ್ಲಿ ಕೇಳಬೇಕೇ? ಗುಲ್ಬರ್ಗದಲ್ಲಿ ಏಪ್ರಿಲ್ ತಿಂಗಳಿನಲ್ಲಿ 123ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಗರಿಷ್ಠ ತಾಪಮಾನ ಹೆಚ್ಚಾಗಿರುವುದನ್ನು ಹವಾಮಾನ ಇಲಾಖೆ ವರದಿ ಮಾಡಿದೆ. ಇಂದು ಕುಡಿಯುವ ನೀರಿಗಾಗಿ ಹಲವಾರು ಫೌಂಡೇಶನ್‌ಗಳು ಸ್ಥಾಪಿತವಾಗಿವೆ ಆದರೆ ಭೂಮಿಯಲ್ಲೇ ಜಲ ಬತ್ತಿ ಹೋದಾಗ ಫೌಂಡೇಶನ್‌ನವರಾದರು ಏನು ಮಾಡಿಯಾರು, ಸರ್ಕಾರದವರ ಮೇಲೆಯೇ ಬರಪರಿಸ್ಥಿತಿ ಕುರಿತು ದೂರನ್ನು ನೀಡುತ್ತೇವೆ. ಹೆಚ್ಚೆಂದರೆ ಸರ್ಕಾರವು ಬರ ಪರಿಹಾರವಾಗಿ ಧನ ಸಹಾಯ ಮಾಡಬಹುದಷ್ಟೇ ಆದರೆ ಹಣವನ್ನು ನೀರಿನ ಹಾಗೆ ಗಬ ಗಬ ಕುಡಿಯಲು ಆಗುವುದೇ? ಮನುಷ್ಯ ಅಥವಾ ಯಾವುದೇ ಜೀವಿಗೆ ಆಗಲಿ ಬಾಯರಿಕೆ ಆದಾಗ ಒಂದು ಲೋಟ ನೀರು ಸಾಕೇ ಹೊರತು ಒಂದು ಲೀಟರ್ ಹಾಲು ಕೊಟ್ಟರು ದಾಹ ತೀರದು ಇದನ್ನು ಬುದ್ದಿಜೀವಿಗಳಾದ ನಾವೇ ತಿಳಿಯದಿದ್ದರೆ ಹಂಡೆಗಟ್ಟಲೇ ನೀರು ಕುಡಿಯುವ ಮೂಖ ಪ್ರಾಣಿಗಳಿಗೆ ತಿಳಿದಿತೇ..... ಇಂತಹ ಬರಪರಿಸ್ಥಿತಿ ಬರಲು ಮೂಲಕಾರಣ ಯಾರು? ನಾವೆ ಅಲ್ಲವೇ... ಮೊದಲು ಪರಿಸರವನ್ನು ನಿಯಂತ್ರಿಸೋಣ ಪರಿಸರದ ಅಭಿವೃದ್ಧಿಯನ್ನು ಮಾಡೋಣ ಇಲ್ಲದಿದ್ದರೆ ಭೂಮಿಯಲ್ಲಿ ಇಂದು ನೀರುಸಿಗದ ಹಾಗೆ ಮುಂದೊಂದು ದಿನ ಎಲ್ಲ ಸಂಪನ್ಮೂಲವೇ ಖಾಲಿಯಾಗಬಹುದು, ಕೇಂದ್ರ ಸರ್ಕಾರವು ಕರ್ನಾಟಕಕ್ಕೆ 723 ಕೋಟಿ ಬರ ಪರಿಹಾರವಾಗಿ ನೀಡಿದೆ. ಇನ್ನುಳಿದಂತೆ ಬರಪರಿಸ್ಥಿತಿಗೆ ಸಿಲುಕಿದ ಮಹಾರಾಷ್ಟ್ರಕ್ಕೆ ನಮಗಿಂತಲೂ ಹೆಚ್ಚಿನ ಮೊತ್ತ ನೀಡಲಾಗಿದೆ. ಅದೇ ರೀತಿ ನದಿಗಳ ನೀರನ್ನು ಸಹ ಉಪಯೋಗಿಸುವಂತೆ ರಾಜ್ಯಗಳಿಗೆ ಸೂಚಿಸಲಾಗಿದೆ. ರಾಯಚೂರು, ಕೊಪ್ಪಳ, ಬಳ್ಳಾರಿ ಮುಂತಾದ ಹೈದರಾಬಾದ್ ಕರ್ನಾಟಕದ ಜಿಲ್ಲೆಗಳಲ್ಲಿ ಎಷ್ಟೋ ಮಕ್ಕಳು ತಾಪಮಾನ ಮತ್ತು ಬರದಿಂದ ತತ್ತರಿಸಿ ದಿನದಿಂದ ದಿನಕ್ಕೆ ಮರಣ ಹೊಂದುತ್ತಿವೆ. ಇಂತಹ ಸಂದರ್ಭದಲ್ಲಿ ನಮ್ಮ ಮಂಗಳೂರು ವಿಶ್ವವಿದ್ಯಾನಿಲಯದ ವಿಜ್ಞಾನದ ವಿದ್ಯಾರ್ಥಿಗಳನ್ನು ಅದರಲ್ಲೂ ಪ್ರಾಣಿಶಾಸ್ತ್ರ ವಿಭಾಗವನ್ನು ಶ್ಲಾಘಿಸಲೇಬೇಕು. ಏಕೆಂದರೆ ವಿ.ವಿ ಆವರಣದ ಗಿಡ ಮರಗಳಲ್ಲಿ ಕಟ್ಟಿಗಳಲ್ಲಿ ಪ್ರಾಣಿಪಕ್ಷಿಗಳಿಗಾಗಿ ನೀರಿನ ಪೊಬರೆಗಳನ್ನು ಇಟ್ಟು ಅದರಲ್ಲಿ ನೀರನ್ನು ತುಂಬಿಡುವ ಕಾಯಕ ಮಾಡಿದ್ದಾರೆ.

ವಿಶ್ವಬ್ಯಾಂಕ್ ಮುಂದಿನ 15 ವರ್ಷಗಳಲ್ಲಿ ದೇಶದ 60 ಜಲಮೂಲಗಳು ಬತ್ತಿ ಹೋಗುವ ಸಾಧ್ಯತೆಗಳಿವೆ ಎಂದು ಎಚ್ಚರಿಕೆ ನೀಡಿದೆ. ಭಾರತದಲ್ಲಿ ಕೆಲವು ಕಡೆ ಜಲ ಮೂಲ ಹೆಚ್ಚಿರುವಲ್ಲಿಯೂ ಸಹ ಅಧಿಕ ಪಟ್ಟು ನೀರನ್ನು ಸುಮ್ಮಸುಮ್ಮನೆ ಪೋಲು ಮಾಡುತ್ತಿದ್ದಾರೆ. ಆದುದರಿಂದ ಜಲಮಟ್ಟ ಸಂಪೂರ್ಣ ಕುಸಿಯುವ ಸಮಾನ ಹತ್ತಿರವಾಗಿದೆ ಎಂದು ಹೇಳಲಾಗಿದೆ. ರೈತರ ಕೃಷಿಗೆ, ಕೈಗಾರಿಕೆಗಳಿಗೆ ನೀರಿಲ್ಲದೆ ಎಷ್ಟೋ ಕ್ಷೇತ್ರಗಳು ಕಾರ್ಯವನ್ನು ಸ್ಥಗಿತಗೊಳಿಸಿವೆ. ಜಲಕ್ಷಾಮ ಎಂಬುವುದರ ಕುರಿತು ಇಡೀ ವಿಶ್ವವೇ ಚಿಂತಿಸುತ್ತಿದೆ. ಇಂತಹ ಪರಿಸ್ಥಿತಿ ನಿಯಂತ್ರಿಸಲು ಪ್ರಕೃತಿಯ ಜೊತೆಗೆ ಮಾನವ ಕೈ ಜೋಡಿಸಬೇಕಾಗಿದೆ

## ಸಂಪಾದಕರಿಗೆ ಪತ್ರ

### ಮಳೆ ನೀರು ಕೊಯ್ಲು ಬಗ್ಗೆ ಜನಜಾಗೃತಿ ಮೂಡಲಿ

ಈ ವರ್ಷ ಉತ್ತಮ ಮಳೆ ಆಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಈಗಾಗಲೆ ತಿಳಿಸಿದ್ದು. ಆದರೆ ಬಂದ ಮಳೆನೀರನ್ನು ಸಂಗ್ರಹಿಸಲು ಅವಕಾಶಗಳಿಲ್ಲ. ಜೊತೆಗೆ ಮಳೆನೀರು ಕೊಯ್ಲು ವಿಷಯದಲ್ಲಿ ಜನರಲ್ಲಿ ಜಾಗೃತಿಗಳು ಕಡಿಮೆ ಇದೆ. ಸುರಿದ ಮಳೆ ನೀರು ಬಯಲು ಸೇರುತ್ತದೆ. ಇದು ನೀರು ಸಂಗ್ರಹಿಸುವಿಕೆಯ ಮೊದಲ ಹೊಡೆತವಿದು ಎಂದು ಹೇಳಬಹುದು. ಅದರ ಕೆಟ್ಟ ಪರಿಣಾಮವಾಗಿ ನೀರಿನ ಜೊತೆಗೆ ವಿದ್ಯುತ್ ಅಭಾವ ತುಂಬಾ ತಲೆದೋರಿದೆ. ಈ ವರ್ಷದ ಎರಡನೇ ಅವಧಿಯ ಕೃಷಿ ಚಟುವಟಿಕೆಗಳು ಸ್ಥಬ್ದವಾಗಿ ಅನ್ನದಾತನ ಬದುಕು ದುಸ್ತರವಾಗಿದ್ದಕ್ಕೆ ಜಲಾಶಯಗಳು ಖಾಲಿಯಾಗಿದ್ದುದೇ ಮೂಲ ಕಾರಣ. ಕೆಲವು ರೈತರು ಕೆರೆಗಳ ಹೂಳೆತ್ತಿ ಜೀವನಕ್ಕೆ ದಾರಿ ಮಾಡಿ-ಕೊಂಡಿದ್ದಾರೆ. ಅದು ಸಣ್ಣ ಪ್ರಮಾಣದ ಕೃಷಿ ಚಟುವಟಿಕೆಗಳಿಗೆ ಆಸರೆಯಾಗಬಹುದು. ಆದರೆ ಆ ಜವಬ್ದಾರಿ ಸರಕಾರಕ್ಕೆ ಅರ್ಥವಾಗಬೇಕಿತ್ತು. ಏನೇ ಆಗಲಿ ಸಮಾಜ ಅಭಿವೃದ್ದಿಗಾಗಿ ಹಲವಾರು ಅಭಿಯಾನಗಳು ಆದಂತೆ ಮಳೆ ನೀರು ಕೊಯ್ಲು ಅಭಿಯಾನವೂ ಮಾಧ್ಯಮಗಳ ಮೂಲಕ ಆಗಬೇಕೆಂಬುವುದು ನಮ್ಮೆಲ್ಲರ ಆಶಯ.

ಮಹಾಂತೇಶ್ ಹಿರೇಮಠ್

# ಕರ್ನಾಟಕದ ದಕ್ಷಿಣಗಂಗೆ–ಕಾವೇರಿ

ಕರ್ನಾಟಕದ ಜೀವನದಿಯಾದ ಕಾವೇರಿಯು ದಕ್ಷಿಣಗಂಗೆ ಎಂದು ಪ್ರಸಿದ್ಧಿ ಪಡೆದ ಭಾರತದ ಪವಿತ್ರ ನದಿಗಳಲ್ಲಿ ಒಂದಾಗಿದೆ. ಕೋಟಿ ಜನರ ಜೀವನದಿ ಕಾವೇರಿಯ ಉಗಮ ತಾಣವಾದ ತಲಕಾವೇರಿಯು ಕರ್ನಾಟಕದ ಪವಿತ್ರ ಯಾತ್ರಾಸ್ಥಳ. ಮಡಿಕೇರಿಯಿಂದ 48 ಕಿ.ಮೀ. ದೂರದಲ್ಲಿರುವ ತಲಕಾವೇರಿಯು ಬ್ರಹ್ಮಗಿರಿ ತಪ್ಪಲಿನಲ್ಲಿದೆ. ತುಲಾ ಸಂಕ್ರಮಣ ಮಾಸದಲ್ಲಿ ಕಾವೇರಿ ಸ್ನಾನ ಮಾಡಿದರೆ ಸಕಲ ಪಾಪಗಳು ನಾಶವಾಗುವುದೆಂಬ ನಂಬಿಕೆ ಇದೆ.



ಕೊಡಗರು ಕಾವೇರಿಯನ್ನು ತಮ್ಮ ಕುಲದೈವದಂತೆ ಪೂಜಿಸುತ್ತಾರೆ. ಪುರಾಣಗಳಲ್ಲಿ ವರ್ಣಿಸಲಾದ ಸಪ್ತ ಪುಣ್ಯ ನದಿಗಳಲ್ಲಿ ಕಾವೇರಿಯು ಒಂದಾಗಿದ್ದು, ದಕ್ಷಿಣದಲ್ಲಿರುವ ಏಕೈಕ ಮಹಾನದಿಯಾಗಿದೆ.

ಐತಿಹ್ಯದ ಪ್ರಕಾರ ದಕ್ಷಿಣ ಪ್ರಾಂತ್ಯವು ನೀರಿಲ್ಲದೆ ಬಂಜರಾಗಿದ್ದ ಸಮಯದಲ್ಲಿ ಅಗಸ್ತ್ಯ ಮುನಿಗಳು ಅಲ್ಲಿನ ಕ್ಷಾಮವನ್ನು ಹೋಗಲಾಡಿಸಲು ಬ್ರಹ್ಮನ ಆಶೀರ್ವಾದದೊಂದಿಗೆ ಶಿವನಿಂದ ಪವಿತ್ರವಾದ ಜಲವನ್ನು ಪಡೆದು ಅವರ ಕಮಂಡಲದಲ್ಲಿ ತುಂಬಿದ್ದರು. ಅವರು ನಂತರ ದಕ್ಷಿಣ ಭಾಗಕ್ಕೆ ಪ್ರವಾಸ ಕೈಗೊಂಡು ಕೊಡಗಿನ ಬೆಟ್ಟಗಳಲ್ಲಿ ಸೂಕ್ತ ಜಾಗಕ್ಕಾಗಿ ಹುಡುಕುತ್ತಿದ್ದಾಗ ವೇಷ ಮರೆಸಿಕೊಂಡು ಬಾಲಕನಾಗಿ ಬಂದ ಗಣಪತಿ ಮುನಿಗಳ ಕಮಂಡಲವನ್ನು ಜಾಗರೂಕತೆಯಿಂದ ಹಿಡಿದುಕೊಳ್ಳುವ ಭರವಸೆ ನೀಡುತ್ತಾನೆ.

ಕಾರಣಾಂತರಗಳಿಂದ ಅಗಸ್ತ್ಯ ಮುನಿಗಳು ತಮ್ಮ ಕೆಲಸದಲ್ಲಿ ತೊಡಗಿಕೊಳ್ಳಲು ಗಣಪತಿ ಆ ಕಮಂಡಲವನ್ನು ಅದೇ ಸೂಕ್ತ ಜಾಗವೆಂದು ಅಲ್ಲಿ ನೆಲಕ್ಕಿಡುತ್ತಾನೆ. ಅದೇ ಸಮಯದಲ್ಲಿ ಬಂದ ಕಾಗೆಯೊಂದು ಕಮಂಡಲದ ಮೇಲೆ ಕುಳಿತುಕೊಳ್ಳುತ್ತದೆ. ಅದನ್ನು ಕಂಡ ಮುನಿಗಳು ಅದನ್ನು ಓಡಿಸಲು ಪ್ರಯತ್ನಿಸಿದಾಗ ಕಮಂಡಲದ ನೀರು ಚೆಲ್ಲಿ ನದಿಯಾಗಿ ಹರಿಯಿತು ಎಂಬ ಪ್ರತೀತಿ ಇದೆ.

ವರ್ಷಂಪ್ರತಿ ಅಕ್ಟೋಬರ್ 17ರ ತುಲಾ ಸಂಕ್ರಮಣದಂದು ಕಾವೇರಿ ಕುಂಡಿಕೆಯಲ್ಲಿ ನಿಗದಿತ ವೇಳೆಗೆ ಕಾವೇರಿ ಉದ್ಭವ ತೀರ್ಥರೂಪಿಣಿಯಾಗುತ್ತಾಳೆ. ಅನಂತರ ಒಂದು ತಿಂಗಳ ಕಾಲ ಕಾವೇರಿ ಜಾತ್ರೆ ನಡೆಯುತ್ತದೆ. ತಲಕಾವೇರಿಯಲ್ಲಿ ಕಾವೇರಿಗೆ ಪ್ರತ್ಯೇಕ ವಿಗ್ರಹವಿರುದಿಲ್ಲ. ಕುಂಡಿಕೆಯಲ್ಲಿರುವ ಕಾವೇರಿ ತೀರ್ಥಕ್ಕೆ ದಿನವೂ ಪೂಜೆ ಸಲ್ಲುತ್ತದೆ. ತಲಕಾವೇರಿಯಲ್ಲಿ ಅಗಸ್ತ್ಯ ಋಷಿಗಳು ಪ್ರತಿಷ್ಠಾಪಿಸಿದ ಶಿವಲಿಂಗವಿದೆ. ಗಣಪತಿ ದೇವಾಲಯವೂ ಇದೆ. ಸುಮಾರು 300 ಮೆಟ್ಟಿಲುಗಳನ್ನೇರಿದರೆ ಬ್ರಹ್ಮಗಿರಿ ಶಿಖರವಿದೆ. ಇದರ ಮೇಲಿನಿಂದ ಪ್ರಕೃತಿ ಸೌಂದರ್ಯ, ಗಿರಿಶಿಖರಗಳನ್ನು ವೀಕ್ಷಿಸಬಹುದು. ತಲಕಾವೇರಿಗೆ ಸಂಜೆ 6 ಗಂಟೆ ಬಳಿಕ ಯಾರಿಗೂ ಪ್ರವೇಶವಿರುದಿಲ್ಲ. ತಲಕಾವೇರಿಯಲ್ಲಿ ಯಾರೂ ರಾತ್ರಿ ತಂಗುವಂತಿಲ್ಲ.

ಮಹಾಭಾರತದ ಆದಿಪರ್ವದಲ್ಲಿ ಅರ್ಜುನನು ತೀರ್ಥಯಾತ್ರೆಗೆ ಹೋಗಿದ್ದಾಗ ಈ ನದಿಯಲ್ಲಿ ಸ್ನಾನ ಮಾಡಿದನೆಂಬ ಉಲ್ಲೇಖವಿದೆ. ರಾಜಸೂಯಯಾಗದ ಸಮಯದಲ್ಲಿ ನಕುಲನು ಇಲ್ಲಿಗೆ ಬಂದಿದ್ದ ಪ್ರಸ್ತಾಪ ಸಭಾಪರ್ವದಲ್ಲಿ ಬರುತ್ತದೆ.

ಕಾವೇರಿ ನದಿಯು ತಲಕಾವೇರಿ ಎಂಬಲ್ಲಿ ಸಮುದ್ರ ಮಟ್ಟದಿಂದ 1341 ಮೀ. ಎತ್ತರದಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಲಕ್ಷಾಂತರ ಹೆಕ್ಟೇರ್ ಪ್ರದೇಶವನ್ನು ಹಸನಾಗಿಸಿ, ಆ ಮೂಲಕ ಸುಮಾರು 805 ಕಿ.ಮೀ. ದೂರ ಹರಿದು ಕಾವೇರಿ ಪಟ್ಣಂ ಎಂಬಲ್ಲಿ ಬಂಗಾಳಕೊಲ್ಲಿಯನ್ನು ಸೇರುತ್ತದೆ. ಕಾವೇರಿ ನದಿಯು ಕರ್ನಾಟಕದ ಶಿವನ ಸಮುದ್ರದ ಬಳಿ ಹರಿಯುವಾಗ 91 ಮೀ. ಎತ್ತರದಿಂದ ಗಗನಚುಕ್ಕಿ ಮತ್ತು ಭರಚುಕ್ಕಿ ಎಂಬ ಎರಡು ಜಲಪಾತವಾಗಿ ಹಾಗು ತಮಿಳುನಾಡಿನ ಹೋಗೇನಕಲ್ ಬಳಿ ಮತ್ತೊಂದು ಜಲಪಾತವಾಗಿ ದುಮುಕುತ್ತದೆ.

ಕಾವೇರಿ ನದಿಗೆ ಮೈಸೂರು ಬಳಿ ಕೃಷ್ಣರಾಜಸಾಗರ ಬಳಿ (ಕನ್ನಂಬಾಡಿ) ಅಣೆಕಟ್ಟನ್ನು 1902ರಲ್ಲಿ ಮತ್ತು ತಮಿಳುನಾಡಿನಲ್ಲಿ ಮೆಟ್ಟೂರು ಅಣೆಕಟ್ಟನ್ನು ನಿರ್ಮಿಸಲಾಗಿದೆ. ಕರ್ನಾಟಕದಲ್ಲಿ ಕಾವೇರಿ ನದಿಗೆ ಹನ್ನೆರಡು ಜಲಾಶಯವಿದೆ. ಅಣೆಕಟ್ಟುಗಳ ಮುಖ್ಯ ಉದ್ದೇಶ ನೀರಾವರಿ ಒದಗಿಸುವುದಾಗಿದೆ. ಮಡದಕಟ್ಟೆಯ ಬಳಿ ಇರುವ ಅಣೆಕಟ್ಟಿನಿಂದ 10,000 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿದೆ. ದಕ್ಷಿಣಗಂಗೆ ಎಂದು ಹೆಸರಾಗಿರುವ ಕಾವೇರಿ ನದಿಯು ಕರ್ನಾಟಕ, ತಮಿಳುನಾಡು, ಕೇರಳ ರಾಜ್ಯಗಳ ಮೂಲಕ ಒಟ್ಟು 94,400 ಚ.ಕಿ.ಮೀ. ಜಲನಯನ ಪ್ರದೇಶವಾಗಿರುವುದು. ಕಾವೇರಿ ನದಿಯು ಅರ್ಕಾವತಿ, ಕಪಿಲಾ, ಲಕ್ಷ್ಮಣತೀರ್ಥ, ಹೇಮಾವತಿ, ಶಿಂಷಾ, ಅಮರಾವತಿ, ಕಬಿನಿ, ಲೋಕಪಾವನಿ, ನೊಯ್ಯಾಲ್, ಭವಾನಿ ಎಂಬ ಉಪನದಿಗಳನ್ನು ಹೊಂದಿದೆ. ಈ ನದಿಯು ಕುಶಾಲನಗರ, ಶ್ರೀರಂಗಪಟ್ಟಣ, ಭವಾನಿ, ಈರೋಡ್, ಕರೂರ್, ತಿರುಚನಾಪಳ್ಳಿ, ಕುಂಭಕೋಣಂ, ಮಾಯಾವರಂ, ಪೊಂಪುಹಾರ್ ಮಾರ್ಗದಲ್ಲಿ ಹರಿದು ಬಂಗಾಳಕೊಲ್ಲಿಯನ್ನು ಸೇರುತ್ತಾಳೆ.

ಅನುಶ್ರೀ.ಕೆ.ಕೆ,

# ಕ್ರಿಕೆಟ್ ಮತ್ತು ತಂತ್ರಜ್ಞಾನ

ಇಂದು 12 ತಿಂಗಳು ಕ್ರಿಕೆಟ್ ಕ್ರಿಕೆಟ್ ಕ್ರಿಕೆಟ್ ಬೌಲರ್ ಬೌಲ್ ಮಾಡಿ ವಿಕೆಟ್‌ಗಾಗಿ ಮನವಿ ಮಾಡುವ ಪರಿಯಂತೂ, ಪ್ರತಿ ಪಂದ್ಯದಲ್ಲೂ ಕಾಣುತ್ತೇವೆ. ಹಿಂದೆಲ್ಲಾ ತಂತ್ರಜ್ಞಾನವಿಲ್ಲದ ಅಂಪೈರ್‌ಗಳು ತೀರ್ಪು ನೀಡಿ ದಂಡ ತೆತ್ತು ಪರಿಸ್ಥಿತಿಗಳು ಸರ್ವ ಸಾಮಾನ್ಯವಾಗಿತ್ತು. ಇಂದು ಹೊಸ ತಂತ್ರಜ್ಞಾನದ ಮೂಲಕ ಅಂಪೈರ್ ಗಳ ಕಷ್ಟ ಕಡಿಮೆಯಾಗಿದೆ. ಥರ್ಡ್ ಅಂಪೈರ್ ಎಂಬ ತಂತ್ರಜ್ಞಾನದಿಂದಾಗಿ ಎಳ್ಳಷ್ಟು ಕ್ಲಿಷ್ಟವಾಗದೇ ಸರಳವಾಗಿ ತೀರ್ಪು ನೀಡಬಹುದಾಗಿದೆ.

ಇಂದು ಕ್ರಿಕೆಟ್ ವಿಶ್ವ ವ್ಯಾಪಿಯಾಗಿದೆ. ಹಾಗೆಯೇ ತಂತ್ರಜ್ಞಾನವೂ ಬದಲಾಗಿದೆ. ಕ್ಷಣ ಮಾತ್ರದಲ್ಲಿ ಪ್ರತಿ ಎಸೆತವನ್ನು ಗಮನಿಸಬಹುದು. ಡಿಜಿಟಲ್ ಕ್ಯಾಮೆರಾ, ಸ್ಪೈಡರ್ ಕ್ಯಾಮ್, ಡ್ರೋನ್ ಕ್ಯಾಮೆರಾ, ಎಲ್ ಇ ಡಿ ಸ್ಟಂಪ್ಸ್‌ನಿಂದಾಗಿ ಇಡೀ ಕ್ರೀಡಾಂಗಣದಲ್ಲಿ ನಡೆಯುವ ಎಲ್ಲಾ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತದೆ. ಪ್ರೇಕ್ಷಕರನ್ನು ಅದರಲ್ಲಿ ಸೆರೆ ಹಿಡಿದು ಅವರನ್ನು ರಂಜಿಸಲಾಗುತ್ತದೆ. ಮೊಟ್ಟ ಮೊದಲ ಎಲ್ ಇ ಡಿ ಸ್ಟಂಪ್ಸ್ (ಬೆಲ್ಸ್)ನ್ನು ಬಳಸಿದ್ದು 2014ರ ಟಿ– ಟ್ವೆಂಟಿ ವಿಶ್ವಕಪ್ ವೇಳೆ ಈ ಪಂದ್ಯಾವಳಿಯಲ್ಲಿ ಈ ಒಂದು ಸ್ಟಂಪ್ಸ್ ಸೆಟ್‌ಗೆ 24ಲಕ್ಷ ರೂ. ಮೊತ್ತವಾಗಿದೆ. ಇದಕ್ಕಿಂತ ಮೊದಲು ಬಿಗ್ ಬ್ಯಾಶ್ ಲೀಗ್‌ನಲ್ಲಿ ಬಳಸಲಾಗಿತ್ತು. ಈ ತಂತ್ರಜ್ಞಾನದ ಮುಖ್ಯ ಉದ್ದೇಶವೇ ತೀರ್ಪು ನ್ಯಾಯಯುತವಾಗಿ ಬರಲಿ ಎಂಬುದು ಅದರ ಜೊತೆಗೆ ಸ್ಟಂಪ್‌ನಲ್ಲಿಯೂ ಸೂಕ್ಷ್ಮ ಕ್ಯಾಮೆರಾ ಮತ್ತು ಸ್ಪೀಕರ್ ಅಳವಡಿಸುವ ತಂತ್ರಜ್ಞಾನವೂ ಬಂದಿದೆ.,

ಇನ್ನೂ ಸ್ಪೈಡರ್ ಕ್ಯಾಮರಾ ಒಂದು ಕ್ರಾಂತಿ ಎಂದೇ ಹೇಳಬಹುದು ಇದು ಕ್ರೀಡೆಯ ಪಕ್ಷಿನೋಟವನ್ನು ಸಮಗ್ರವಾಗಿ ಸೆರೆಹಿಡಿಯುತ್ತದೆ ಚಿಕ್ಕ ದಾರದ ಎಳೆಯಲ್ಲಿ ಟೆಲಿ ರೂಪದಲ್ಲಿ ಚಲಿಸುವ ಈ ಕ್ಯಾಮರಾ ಗೊತ್ತೆ ಇಲ್ಲದಂತೆ ಕಾರ್ಯ ನಿರ್ವಹಿಸುತ್ತದೆ. ಇನ್ನು ಥರ್ಡ್ ಅಂಪೈರ್ ಬಗ್ಗೆ ಹೇಳಲೇ ಬೇಕು ಥರ್ಡ್ ಅಂಪೈರ್ ಎಂದರೆ ಬೇರಾರು ಅಲ್ಲದೇ ಹೊಸ ತಂತ್ರಜ್ಞಾನದ ಕ್ಯಾಮರಾ.ಇಷ್ಟಾಗಿಯೂ ಈ ಕ್ರೀಡೆಯಲ್ಲಿ ಮೋಸದಾಟಗಳು ಸಾಗುತ್ತಲೇ ಇದೆ. ಟವೆಲ್ ಹಗರಣ ಎಲ್ಲರಿಗೂ ಗೊತ್ತಿರುವ ವಿಚಾರವೇ ಆಗಿದೆ. ಆದರೂ ಅಂದಿನಷ್ಟು ತಪ್ಪುಗಳು ಇಂದು ಮರುಕಳಿಸುವುದಿಲ್ಲ

# ಸದ್ದಿಲ್ಲದ ಕಡಲತಡಿಯ ಹೆಜ್ಜೆಗಳು

ಕರಾವಳಿ ಎಂದಾಕ್ಷಣ ಮೊದಲು ನೆನಪಾಗುವುದು ವಿಶಾಲವಾದ ಕಡಲತೀರ, ಸಮುದ್ರವನ್ನೇ ಮೆಲ್ಲಗೆ ಹೀರಿಕೊಳ್ಳುತ್ತಿರುವ ಆಕಾಶ, ಬೀಳುತ್ತಿರುವ ಬೆಳಗಿನ ಎಳೆಯ ಬೆಳಕಿಗೆ ತೀರಕ್ಕೆ ಬಂದು ನಿಲ್ಲುವ ಮೀನುಗಾರಿಕಾ ದೋಣಿಗಳು. ಕಡಲತಡಿಯಲ್ಲಿ ಮೀನಿನ ಹೆಜ್ಜೆ ಹಿಂದೆ ಓಡುವ ಮೊಗವೀರ ಜನಾಂಗ. ಕಡಲಿನಾಳದಿಂದ ಬಲೆಬೀಸಿ ಮೀನುಗಳನ್ನು ಹೊತ್ತು ತರುವ ಗಂಡಸರು. ಅವರು ತರುವ ಮೀನುಗಳನ್ನು ಬುಟ್ಟಿ ತುಂಬಾ ತುಂಬಿಕೊಂಡು ಮಾರಾಟ ಮಾಡುವ ಮೀನುಗಾರ ಮಹಿಳೆಯರು.

ಮೊಗವೀರರಿಗೆ ಜೀವನ ಪಯಣಕ್ಕೆ, ಮೀನುಗಾರಿಕೆಯೇ ಆಧಾರ. ದೋಣಿಯ ಜೊತೆ ಬದುಕಿಗೂ ಹುಟ್ಟು ಹಾಕುತ್ತಾ, ಮೀನಿಗಾಗಿ ಬಲೆಬೀಸುವ ಕಾಯಕ ಇವರದು. ಯಾವುದೇ ಕ್ಷೇತ್ರದಲ್ಲಾಗಲೀ ಮಹಿಳೆಯನ್ನು ಹೊರತಾಗಿರಿಸಿ ಪರಿಪೂರ್ಣತೆಯನ್ನು ಅಪೇಕ್ಷಿಸುವುದು ಕಷ್ಟಸಾಧ್ಯ. ಇಲ್ಲೂ ಮಹಿಳೆ ರೂಪಿಸಿಕೊಂಡಿರುವ ಜಗತ್ತು ವಿಶಾಲವಾಗಿದೆ. ಬದುಕನ್ನು ಕಟ್ಟಿಕೊಡುವ ಬುಟ್ಟಿಯೊಳಗಿನ ಪಟ ಪಟ ತುಡಿಯುವ ಮೀನುಗಳು ಒಂದೆಡೆಯಾದರೆ, ಜೋಳಿಗೆ ತುಂಬುವ ನಿರಾಳವಾದ ಮಾತಿನ ಬಂಡವಾಳ ಇನ್ನೊಂದೆಡೆ. ಗಿರಾಕಿ ಬಂದು "ಎಷ್ಟಮ್ಮಾ ಈ ಮೀನಿಗೆ?" ಎಂದರೆ ಸಾಕು ಗಿರಾಕಿ ಮೀನು ಖರೀದಿಸುವವರೆಗೂ ಮಾತಲ್ಲೇ ಕಟ್ಟಿ ಹಾಕಿ ತಮ್ಮ ವ್ಯಾಪಾರ ಕುದುರಿಸುವವರು ಈ ಮತ್ಸ್ಯಕನ್ಯೆಯರು. ಆದರೆ ಇದು ಅವರಿಗೆ ಅನಿವಾರ್ಯ.



ಕರಾವಳಿ ಭಾಗಗಳಲ್ಲಿ ಮೀನುಗಾರಿಕೆ ಉದ್ಯಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಂಡಿರುವವರು ಮಹಿಳಾಮಣಿಗಳು. ಮೊಗವೀರ ಒಳಗೊಂಡಂತೆ ಇನ್ನು ಹಲವು ಜನಾಂಗದ ಬಡಮಹಿಳೆಯರು ಸ್ವಾವಲಂಬನೆ ಬದುಕಿನ ರುಚಿ ಕಂಡುಕೊಂಡಿದ್ದಾರೆ. ಇವರ ಬದುಕ ಬುಟ್ಟಿಯೊಳಗಿಂದ ಒಂದೊಂದ ಮೀನುಗಳನ್ನು ಹೊರತೆಗೆದಂತೆ ಅವರ ಜೀವನ ಚಿತ್ರಣ ಕಣ್ಣಮುಂದೆ ತೆರದುಕೊಳ್ಳುತ್ತದೆ. ಆದರೆ ನಮ್ಮಲ್ಲಿರುವ ಚಿತ್ರಣವೇ ಬೇರೆ. ಮೊಗವೀರ ಪುರುಷರು ಕಡಲಾಳಕ್ಕೆ ಮೀನಿನ ಬಲೆ ಬೀಸಿದರೆ, ಮೀನಿನ ವ್ಯಾಪಾರಕ್ಕಾಗಿ ಕಡಲಾಚೆಗಿನ ಗ್ರಾಹಕರಿಗೆ ಬಲೆಬೀಸಿ ಮೊಗವೀರ ಮಹಿಳೆಯರು ಮೀನುಗಳನ್ನು ಮಾರಾಟ ಮಾಡುತ್ತಾರೆ ಎಂಬುದು. ಇದೆಲ್ಲದರ ಹೊರತಾಗಿ ಇವರ ಬದುಕು ಬೇರೊಂದು ಪರದೆಯ ಹಿಂದೆ ನಿಲ್ಲುತ್ತದೆ.

ದೋಣಿಗಳು ಹೊತ್ತು ತರುವ ಮತ್ಸ್ಯರಾಶಿಯನ್ನು ಬುಟ್ಟಿಗಳ ಲೆಕ್ಕದಲ್ಲಿ ಖರೀದಿಸಿಕೊಂಡು ಕೆಲ ಮಹಿಳೆಯರು ಅವರಿಗೆಂದೇ ನಿಗಧಿಪಡಿಸಿದ ಮಾರುಕಟ್ಟೆ ಜಾಗಕ್ಕೆ ಬರುತ್ತಾರೆ. ಇನ್ನು ಕೆಲವರು ಮೀನುದಕ್ಕೆಯಲ್ಲೇ ವ್ಯಾಪಾರ ಮಾಡುತ್ತಾರೆ. ಅಲ್ಲೂ ಅವರ ವ್ಯಾಪಾರದ ವೈಖರಿ ಗಮನಿಸಬೇಕು. ತಾವ್ಯಾರಿಗೂ ಕಡಿಮೆಯಿಲ್ಲ ಎನ್ನುವಂತೆ ಮಾತಿನ ಪೈಪೋಟಿಗೆ ನಿಲ್ಲುವಳು. ಬೋಟ್‌ಗಳಲ್ಲಿ ಬರುವ ಮೀನುಗಳ ರಾಶಿ ರಾಶಿಯನ್ನು, ಅಷ್ಟೋ ಇಷ್ಟೋ ಬೆಲೆಗೆ ಮಧ್ಯವರ್ತಿಯಿಂದ ಖರೀದಿಸಿ, ನಂತರ ಅವುಗಳನ್ನು ಹೊಟ್ಟೆಪಾಡಿಗಾಗಿ ಲಾಭ ಬರುವಂತೆ ಮಾರಾಟಕ್ಕಿಳಿಯುತ್ತಾಳೆ. ಅಲ್ಲಿಯೂ ಅವರ ಲಾಭಾಂಶವನ್ನು ಕಿತ್ತುಕೊಳ್ಳುವ ಗ್ರಾಹಕರು ಚೌಕಾಸಿಗಿಳಿಯುತ್ತಾರೆ. ಮತ್ತೆ ಕೆಲವರು ಅಲ್ಲಿಂದ ಪಡೆದ ಮೀನುಗಳನ್ನು ಮಾರುಕಟ್ಟೆಗೆ ತಂದು ತಮಗೆ ನಿಗಧಿಸಿಪಡಿಸಿದ ಜಾಗದಲ್ಲಿ ಕುಳಿತು ಮಾರಾಟ ಮಾಡಬೇಕು. ತಾವು ಕುಳಿತ ಜಾಗಕ್ಕೂ ಸುಂಕ ಕಟ್ಟಬೇಕು. ವಿಶಾಲವಾದ ಜಾಗದಲ್ಲಿ, ಕಿರಿದಾದ ಪುಟ್ಟ ಮಳಿಗೆಗಳಲ್ಲಿ ಮೀನುಗಳನ್ನು ಪ್ರದರ್ಶನಕ್ಕಿಟ್ಟು ಗ್ರಾಹಕರ ಕಣ್ಣು ಸೆಳೆಯಬೇಕು. ಇಲ್ಲಿರುವವರೆಲ್ಲರೂ ಮಹಿಳೆಯರೇ, ಅವರಿಗವರೇ ಪೈಪೋಟಿಗಳು. ಪ್ರತಿಯೊಬ್ಬರಿಗೂ ಸ್ಪರ್ಧೆಯ ವೇದಿಕೆ ಇದು.

ಮಳೆಗಾಲದಲ್ಲಿ ಮೀನುಗಾರಿಕೆ ಸ್ಥಗಿತಗೊಂಡಾಗ ಈ ಒಣಮೀನಿನ ವ್ಯಾಪಾರವೇ ಇವರ ಕೈಹಿಡಿಯುವುದು. ದಿನವಿಡೀ ವ್ಯಾಪಾರ ಹೆಣೆಯುವ ನಿಟ್ಟಿನಲ್ಲಿ ಕೈಗಳು ನೀರಲ್ಲಿ ನೆನೆದು ಬಿಳಿಚಿಕೊಂಡಿರುತ್ತವೆ. ಈ ಕೈಯ್ಯಲ್ಲಿದೆ ಗ್ರಾಹಕರನ್ನು ಮನವೊಲಿಸುವ ಕೈಚಳಕ. ಕೈಯೊಳಡಗಿದ ಚಾಣಾಕ್ಷತನವನ್ನು ದಿನಪೂರ್ತಿ ಉಪಯೋಗಿಸಿದರೂ ಮತ್ತದೇ ಹೊಸತನ, ಹುಮ್ಮಸ್ಸಿನಿಂದ ಮತ್ತದೇ ಚಾಣಾಕ್ಷತನವನ್ನು ಹೊಸ ರೂಪದಲ್ಲಿ ಗ್ರಾಹಕರೆದುರು ಬೀಸುತ್ತಾರೆ. ಇವರ ಈ ಚಾಣಾಕ್ಷತನದ ಬಲೆಯೊಳಗೆ ಸಿಲುಕದ ಗ್ರಾಹಕರು ಅತಿ ವಿರಳ. .ವ್ಯಾಪಾರದ ಜಾಗದ ಶುಚಿತ್ವಕ್ಕಾಗಿ ಕಾರ್ಪೋರೇಶನ್‌ನವರು ಹಣ ಪಡೆದುಕೊಂಡರೂ, ಮುಂಜಾನೆ ವ್ಯಾಪಾರಕ್ಕೆಂದು ಬಂದಾಗ ಈ ಮಹಿಳೆಯರೇ ತೊಳೆದು ಶುಚಿಗೊಳಿಸಬೇಕಾದ ಅವಸ್ಥೆ ಇವರದು. ಹಾಗಿದ್ದರೂ ಸ್ವಚ್ಛವಾದ ಜಾಗದಲ್ಲಿ ಕುಳಿತು, ನೆಮ್ಮದಿಯಿಂದ ವ್ಯಾಪಾರ ಮಾಡುವ ಅವಕಾಶಗಳು ಇವರ ಪಾಲಿಗೆ ಮರೀಚಿಕೆಯಾಗಿವೆ.

ಆರೋಗ್ಯದಂತಹ ಮತ್ತು ಈ ಎಲ್ಲಾ ಸಮಸ್ಯೆಗಳಿಗೆ ಎದೆಯೊಡ್ಡಿ ಕುಲಕಸುಬನ್ನು ಪೊರೆಯುತ್ತಿರುವ, ಇವರ ಗೆಜ್ಜೆಯಿಲ್ಲದ ಹೆಜ್ಜೆಯ ನಾದ ಆಲಿಸಿ.

**ಮೇಘಲಕ್ಷ್ಮಿ ಮರುವಾಳ**

# ಬಣ್ಣಗಳ ಚಿತ್ತಾರ ಹೋಳಿ

ಹೋಳಿ ಹಬ್ಬವೆಂದರೆ ಎಲ್ಲರ ಮನಸ್ಸಲ್ಲೂ ಮಾಡುವುದು ಬಣ್ಣಗಳ ಚಿತ್ತಾರ, ಹೋಳಿ ಹಬ್ಬಕ್ಕೆ ಕಾಮನ ಹಬ್ಬ ಎಂದು ಕೂಡ ಕರೆಯಲಾಗುತ್ತದೆ. ಶಿವ ಪಾರ್ವತಿಯರ ಏಕಾಂತವನ್ನು ಭಂಗ ಮಾಡಿದ ಕಮನ(ಮನ್ಮಥ) ನನ್ನು ಶಿವನು ತನ್ನ ಮೂರನೇ ಕಣ್ಣನ್ನು ತೆರೆದು ಸುಟ್ಟುಹಾಕಿದನೆಂಬ ಪುರಾಣವಿದೆ. ಇದೇ ರೀತಿ ಹಲವಾರು ಪ್ರತೀತಿಗಳಿವೆ. ಇನ್ನು ಹೋಳಿ ಹಬ್ಬವನ್ನು ಹೆಚ್ಚು ಕಡಿಮೆ ವಿಶ್ವದಾದ್ಯಂತ ಆಚರಿಸಲಾಗುತ್ತಿದೆ. ಭರತ ಖಂಡಕ್ಕೆ ಸೀಮಿತವಾಗಿದ್ದ ಹಬ್ಬ ಇಂದು ಜಾಗತಿಕವಾಗಿ ಆಚರಣೆಯಾಗುತ್ತಿವೆ. ನಮ್ಮ ದೇಶದ ಉತ್ತರ ಭಾರತದಲ್ಲಿ ಈ ಹಬ್ಬವನ್ನು ತುಂಬಾ ಸಂಭ್ರಮ ಸಡಗರದಿಂದ ಆಚರಿಸಲಾಗುತ್ತಿದೆ. ದಕ್ಷಿಣ ಭಾರತಕ್ಕೆ ಬಂದಂತೆಲ್ಲಾ ಕಡಿಮೆಯಾಗಿದೆ. ಮಹಾರಾಷ್ಟ್ರ ಕರ್ನಾಟಕದ ಉತ್ತರ ವಾಯುವ್ಯ ಭಾಗದಲ್ಲಿ ವಿಶಿಷ್ಟವಾಗಿ ಆಚರಣೆ ಮಾಡಲಾಗುತ್ತದೆ. ಕಾಮನ ಹುಣ್ಣಿಮೆಯ ಹಿಂದಿನ ದಿನ ಕರ್ನಾಟಕದ ಹಲವು ಭಾಗಗಳಲ್ಲಿ ಸೌದೆಯನ್ನು ಒಂದು ಕಡೆ ಒಟ್ಟುಗೂಡಿಸಿ ಊರಿನ ಮುಖಂಡರು ಎಲ್ಲರೂ ಸೇರಿ ಊರಿನ ಪ್ರಮುಖ ಭಾಗದಲ್ಲಿ ಕಾಮದಹನ ಮಾಡಲಾಗುತ್ತದೆ. ಈ ಕಾಮದಹನ ಇನ್ನೂ ಕಾಲ ಇದೆ ಎನ್ನುವಾಗಲೇ, ಊರಿನಲ್ಲಿರುವ ಯುವಕರೆಲ್ಲಾ ರಾತ್ರಿ ಹೊತ್ತು ಮನೆ ಮನೆಗಳಿಗೆ ಹೋಗಿ ಎಲ್ಲಾರೂ ಮಲಗಿದ ಮೇಲೆ ಸೌದೆಯನ್ನು ಕದ್ದು ತಂದು ಸಂಗ್ರಹಿಸುತ್ತಾರೆ, ಈ ತರಹ ಕದ್ದು ತಂದ ಕಟ್ಟಿಗೆಯನ್ನು ಯಾವುದೇ ಕಾರಣಕ್ಕೂ ಆ ಸೌದೆಯ ಯಜಮಾನ ಮುಟ್ಟುವಂತಿಲ್ಲ



ಒಂದು ವೇಳೆ ಕಮದಹನ ಸ್ಥಳದಲ್ಲಿ ಸೌದೆಯನ್ನು ಮುಟ್ಟಿದರೆ ಆಯಿತು, ಕೆಲವು ಪುಡಾರಿ ಯುವಕರು ಗದ್ದೆಗಳಿಗೆಲ್ಲಾ ನುಗ್ಗಿ ದಡ್ಡಿ (ಹಿತ್ತಲು)ಯಲ್ಲಿ ಕೂಡಿಟ್ಟ ಬೆಲೆ ಬಾಳುವ ಮರದ ದಿಮ್ಮಿಗಳನ್ನು ಕದ್ದು ತರುವುದುಂಟು ಈ ತರ ಯಾಕೆ ಸೌದೆ ಸಂಗ್ರಹಿಸುತ್ತಾರೆಂದರೆ, ಕಮದಹನ ಸುಡುವ ಕ್ರಿಯೆ ಹೆಚ್ಚು ಎತ್ತರಕ್ಕೆ ಬೆಂಕಿ ಕಾಣಬೇಕೆಂದು ಹಳ್ಳಿ ಹಳ್ಳಿಗಳ ನಡುವೆ ಪೈಪೋಟಿ ಇರುತ್ತದೆ. ಆದುದರಿಂದ ಕೆಲವು ಕಡೆಗಳಲ್ಲಿ ಈರೀತಿಯ ಕಾಮದಹನದ ನಂತರವು ಆ ಬೆಂಕಿ (ಕಿಚ್ಚು) ಮೂರು ನಾಲ್ಕು ದಿನಗಳವರೆಗೂ ಇರುತ್ತದೆ. ಸಾಮಾನ್ಯವಾಗಿ ದಹನವು ಫಾಲ್ಗುಣ ಮಾಸದ ಶುಕ್ಲ ಪಕ್ಷದ ಪೌರ್ಣಮಿ(ಹುಣಿಮೆ)ಯಂದು ನಸುಕಿನ ಜಾವ ಜರುಗುತ್ತದೆ. ದಹನ ಕಡಿಮೆಯಾದ ನಂತರ ಅದರ ಕಿಚ್ಚನ್ನು ಮನೆ ಮನೆಗೆ ತೆಗೆದುಕೊಂಡು ಹೋಗಿ ಅಂದಿನ ಇಡೀ ದಿನದ ಅಡುಗೆಯನ್ನು ಆ ಕಿಚ್ಚಿನಿಂದ ಹೊತಿಸಿದ ಬೆಂಕಿಯಿಂದಲೇ ಮಾಡುತ್ತಾರೆ, ಹಾಗೂ ಅದರಲ್ಲೇ ಕಡಲೆ ಹುರಿದು ತಿನ್ನುವುದು ವಾಡಿಕೆಯಾಗಿದೆ. ಅದೇ ದಿನದಂದು ಯಾರಾದರು ಒಬ್ಬ ವ್ಯಕ್ತಿಗೆ ಹೆಣದ ವೇಷ ಹಾಕಿ ಊರು ತುಂಬೆಲ್ಲಾ "ಸತ್ತನಪ್ಪ ಸತ್ತನೋ ಕಾಮಣ್ಣ ಸತ್ತನೋ" ಎಂದು ಉದ್ಗಾರ– ಉದ್ಘೋಷಣೆಗಳನ್ನು ಕೂಗುತ್ತಾ ಮನೆ ಮನೆಗಳಿಗೆ ತೆರಳಿ ಹಣ ಸಂಗ್ರಹಿಸುತ್ತಾರೆ, ಹಳ್ಳಿ ಆಟಗಳಾದ ಟಗರು ಕಾಳಗ, ಜಾನಪದ ಕುಣಿತಗಳು, ಇತರ ಮಸ್ತಿ ಆಟಗಳನ್ನು ಈ ದಿನದಂದು ಆಡಲಾಗುತ್ತದೆ.

ಇದೆಲ್ಲಾ ಕಮದಹನ (ಹೋಳಿ) ಹಬ್ಬದ ಕುರಿತು ಇರುವಂತಹ ಕೆಲವು ಆಚರಣೆಗಳು ಇದೇ ರೀತಿ ಉತ್ತರ ಭಾರತದಲ್ಲಿ ನೃತ್ಯ ಮಾಡಿ, ಬಣ್ಣ ಎರಚುದರ ಮೂಲಕ ಎಲ್ಲಾರ ಬದುಕಲ್ಲು ಬಣ್ಣ ತುಂಬಿರಲಿ ಎಂಬುದಾಗಿ ಆಚರಿಸುತ್ತಾರೆ, ಬಣ್ಣಕ್ಕೆ ಕಾರಣವೇನಿರಬಹುದು? ಯಾಕೆಂದರೆ ಮನುಷ್ಯರಾದ ನಾವೇ ದಿನ ದಿನವೂ ಬೇರೆ ಬೇರೆ ಬಣ್ಣದ ಬಟ್ಟೆಗಳನ್ನು ತೊಡುತ್ತೇವೆ, ಇದು ಬಾಹ್ಯ ಆಕರ್ಷಣೆ ಅಷ್ಟೆ, ಅದೇ ರೀತಿ ಆಂತರಿಕ ಜೀವನವು ಎಲ್ಲರಿಗೂ ವರ್ಣರಂಜಿತ ಬದುಕನ್ನು ಕಲ್ಪಿಸಲಿ ಎಂಬುದು ಈ ಹೋಳಿಯ ಆಶಯವಾಗಿದೆ. ಕೊನೆಯದಾಗಿ ಭಾರತ ವಿಶಿಷ್ಟ ರಾಷ್ಟ್ರವೆನ್ನಲು ಒಂದು ಮಾತೆಂದರೆ ನಮ್ಮಲ್ಲಿ ಏಕ ಪತ್ನಿ ವ್ರತಸ್ಥ ರಾಮನಿಗೂ ಸ್ಥಾನ(ಪ್ರಮುಖ್ಯತೆ) ಇದೆ. ಬಹುನಾರಿ ಸಂಗಾಚಾರಿ ಕಾಮ(ಮನ್ಮಥ)ನಿಗೂ ಸ್ಥಾನವಿದೆ. ಅಂದರೆ ಇದರರ್ಥ ಎಷ್ಟೆ ಒಳ್ಳೆದು ಅಥವಾ ಕೆಟ್ಟದ್ದು ಯಾವುದೂ ಸಂಭವಿಸಿದರೂ ಈ ಭರತಖಂಡ ಸಹಿಸಿಕೊಂಡು ಶಾಂತಿಯಿಂದ ಸಾಗುತ್ತದೆ.

**ಮಹಾಂತೇಶ್ ಹಿರೇಮಠ್**

**ಮೊದಲನೇ ಪುಟದಿಂದ...**

ಅಂದಿನ ಕಾಲದಲ್ಲಿ ದಾಸ ಪರಂಪರೆಯಲ್ಲಿ ಹುಟ್ಟಿದ ಪ್ರತಿಭಟನೆ, ಹೋರಾಟದ ಪರಿಣಾಮವಾಗಿ ಇಂದು ಶಿಕ್ಷಣ ಸಂಸ್ಥೆಗಳಲ್ಲಿ ಹೆಚ್ಚಾಗಿ ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತ ವಿದ್ಯಾರ್ಥಿಗಳೂ ವ್ಯಾಸಂಗ ಮಾಡುವಂತಾಗಿದೆ ಎಂದು ಹೇಳಿದರು.

ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಟಿ.ಡಿ.ಕೆಂಪರಾಜು ಅಧ್ಯಕ್ಷತೆ ವಹಿಸಿ, ಜೀವನ ಶೈಲಿ, ಶಿಕ್ಷಣ, ಆರ್ಥಿಕ ಅಭಿವೃದ್ಧಿಯ ಜೊತೆಗೆ ತಾಂತ್ರಿಕತೆಯ ಮಾಯೆಯಿಂದಾಗಿ ಮುಂದಿನ ದಿನದಲ್ಲಿ ಸಾಹಿತ್ಯ, ಸಂಸ್ಕೃತಿ, ಕಲೆಗೂ ಮನ್ನಣೆ ದೊರಕಬೇಕಿದೆ. ದಾಸ ಸಾಹಿತ್ಯ, ಚಿಂತನೆ ಕೊಡುಗೆಗಳು ಯುವಪೀಳಿಗೆಗೆ ಆದರ್ಶವಾಗಿ ಪರಿಣಮಿಸಬೇಕು. ಅನೇಕ ಸಾಧು ಸಂತರು, ದಾಸರು ತಮ್ಮದೇ ಆದ ಕೊಡುಗೆ ನೀಡಿದ ಸಮಾಜ ನಮ್ಮದು ಎಂದು ತಿಳಿಸಿದರು.

ಕನಕದಾಸ ಸಂಶೋಧನಾ ಕೇಂದ್ರದ ನಿರ್ದೇಶಕರಾದ ಡಾ.ಶಿವರಾಮ ಶೆಟ್ಟಿ ಪ್ರಾಸ್ತವಿಕವಾಗಿ ಮಾತನಾಡಿ, ಸ್ವಾಗತಿಸಿದರು. ಕನಕದಾಸ ಸಂಶೋಧನಾ ಕೇಂದ್ರದ ಸಂಶೋಧನಾ ಸಹಾಯಕ ನಿತಿನ್ ಕಾರ್ಯಕ್ರಮ ನಿರೂಪಿಸಿದರು. ವಸಂತ್ ವಂದಿಸಿದರು, ವಿದ್ಯಾರ್ಥಿನಿ ನಂದಿನಿ ಕನಕದಾಸರ ಕೀರ್ತನೆಯನ್ನು ಹಾಡಿದರು.

## ವ್ಯಕ್ತಿ ಚಿತ್ರ

# ದಕ್ಷಿಣ ಭಾರತ ಕಂಡ ಯಶಸ್ವಿ ನಟ ಮತ್ತು ಜನಪದ ಗಾಯಕ ಮಣಿ

ಒಂದು ಸಣ್ಣ ಕಲಾ ಟ್ರೂಪ್ಪನಲ್ಲಿ ಮಿಮಿಕ್ರಿ ಕಲಾವಿದನಾಗಿ ವೃತ್ತಿ ಆರಂಭಿಸಿ ಅನಂತರ ತನ್ನ ಅವಿರತ ಪರಿಶ್ರಮದಿಂದಾಗಿ ಕನ್ನಡ, ಮಲಯಾಳಂ, ತಮಿಳು ಸೇರಿದಂತೆ ಬಹುಭಾಷೆಗಳಲ್ಲಿ ನಟಿಸಿ ಗಮನ ಸೆಳೆದ 'ಕಲಭವನ್ ಮಣಿ ದಕ್ಷಿಣ ಭಾರತ ಕಂಡ ಯಶಸ್ವಿ ನಟ ಮತ್ತು ಜನಪದ ಗಾಯಕ. ಸುಮಾರು 200ಕ್ಕೂ ಅಧಿಕ ಚಿತ್ರಗಳಲ್ಲಿ ನಟಿಸಿರುವ ಅವರ ಖಡಕ್ ನಟನ ಪಾತ್ರ, ಭಾಷೆ ರಾಜ್ಯಗಳ ಎಲ್ಲೆ ಮೀರಿ ವೀಕ್ಷಕರನ್ನು ಬೆಚ್ಚಿ ಬೀಳಿಸಿದ್ದು ಉಂಟು.

ಮೂಲತಃ ಕೇರಳದ ಚಾಲಕುಡಿಯವರಾದ ಮಣಿ ಅನಂತರ ಕೊಚ್ಚಿಯ ಕಲಾಭವನ್ ತಂಡದಲ್ಲಿ ಮಿಮಿಕ್ರಿ ಕಲಾವಿದನಾಗಿ ಸೇರಿದರು. ಚಿಕ್ಕ ವಯಸ್ಸಿನಿಂದಲೇ ತುಂಬಾ ಪ್ರತಿಭಾವಂತರಾಗಿದ್ದ ಮಣಿ ಉತ್ಸಾಹಕ್ಕೆ ಇಂಬು ನೀಡಿದ್ದು 1982 ರಲ್ಲಿ ನಡೆದ ಸ್ಟೇಜ್ ಶೋ ಒಂದರಲ್ಲಿ ಸಿಕ್ಕ ಪ್ರಶಸ್ತಿ. ಅನಂತರ ಅವಕಾಶಗಳ ಬೆನ್ನುಬಿದ್ದ ಅವರು ಬಡತನದ ನಡುವೆ ತಮ್ಮ ಕುಟುಂಬದ ಹೊಣೆಗಾರಿಕೆ ಹೊತ್ತರು.ಕುಟುಂಬದ ಆಟೋ ಡ್ರೈವರ್ ಆಗಿಯೂ ಬದುಕು ಸವೆಸಿದರು. 'ಸಲ್ಲಾಪಮ್' ಚಿತ್ರದ ಮೂಲಕ ತಮ್ಮದೇ ಆದ ಯುಗ ಆರಂಭಿಸಿದರು. ಅನಂತರ ಕಲ್ಯಾಣ ಸೌಗಂಧಿಕಂ, ಮಂತ್ರಮೋತಿರಂ ನಂತರ ಸಾಲು ಸಾಲು ಹಿಟ್ ಸಿನಿಮಾಗಳಲ್ಲಿ ಮಣಿ ಕಾಣಿಸಿಕೊಂಡದ್ದಲ್ಲದೆ, ನರಸಿಂಹನ್ ,ವಲ್ಯತ್ತನ್ ನಂತಹ ಯಶಸ್ವಿ ಸಿನಿಮಾಗಳನ್ನು ನೀಡಿದ ಶಾಜಿ ಕೈಲಾಸ್ ಸಿನಿಮಾಗಳ ಖಾಯಂ ನಟರಾದರು. ಜೊತೆಗೆ ಮಲಯಾಳಂ ಚಿತ್ರರಂಗದ ಬಿಗ್ ಬಜೆಟ್ ಸಿನಿಮಾಗಳ ಭಾಗವಾದರು.



ಮಣಿ ಎಂದಿಗೂ ಒಂದೇ ಬಗೆಯ ಪಾತ್ರಗಳಿಗೆ ಗಂಟು ಬಿದ್ದವರಲ್ಲ.ಮೊದಮೊದಲಿಗೆ ಕಾಮಿಡಿ ನಟನಾಗಿ ಬಣ್ಣ ಹಚ್ಚಿದ ಮಣಿ ಬದಲಾದ ಸನ್ನಿವೇಶಗಳಲ್ಲಿ ಖಳ ನಟನಾಗಿ,ನಾಯಕ ನಟನಾಗಿಯೂ ಮಿಂಚಿದರು.ಇದಕ್ಕೆ ಬೆಸ್ಟ್ ಉದಾಹರಣೆಯೆಂದರೆ ರಾಷ್ಟ್ರೀಯ ಪ್ರಶಸ್ತಿ ಪಡೆಯುವ ಸಾಲಿನಲ್ಲಿ ಮೋಹನ್‌ಲಾಲ್ ಅವರ 'ವಾನಪ್ರಸ್ಥಂ' ಸಿನಿಮಾಗೆ ತೀವ್ರ ಪೈಪೋಟಿ ನೀಡಿದ್ದ ವಾಸಂತಿಯುಂ ಲಕ್ಷ್ಮೀಯುಂ ಪಿನ್ನೆ ನಾನುಂ. ಆ ಸಿನೇಮಾದ ಕುರುಡ ಗಾಯಕನ ನಟನೆಗಾಗಿ ಸ್ಪೆಷಲ್ ಜ್ಯೂರಿ ನ್ಯಾಷನಲ್ ಅವಾರ್ಡ್‌ನ್ನು ಮುಡಿಗೇರಿಸಿಕೊಂಡ ಮಣಿ ಅವರು ಕರುಮ ಕುಡಿಕುಟ್ಟನ್ 'ಆಕಾಶತ್ತಿಲೇ ಪರವಾಕಲ್'ನಂತಹ ವಿಭಿನ್ನ ಸಿನೇಮಾಗಳಲ್ಲೂ ಸೈ ಎನಿಸಿಕೊಂಡರು.

**ಅಂತರ್ ರಾಜ್ಯಗಳಲ್ಲಿ ಅಬ್ಬರಿಸಿದ ಮಣಿ**

ತಮಿಳು,ತೆಳುಗು, ಕನ್ನಡ ಚಿತ್ರರಂಗಗಳು ಮಣಿಯನ್ನು ತೆರೆಗೆ ತರಲು ಹಾತೊರೆದವು.

ಈ ರೇಸ್‌ನಲ್ಲಿ ಸಾಲು ಸಾಲು ಪರಭಾಷಾ ನಿರ್ದೇಶಕರು, ನಟರು, ಮಣಿಯ ಹಿಂದೆ ಮುಗಿಬಿದ್ದರು. ದಕ್ಷಿಣದ ಸೂಪರ್ ಸ್ಟಾರ್‌ಗಳ ಮುಂದೆ ಅಬ್ಬರಿಸಿದ ಮಣಿ ಅದುವರೆಗೆ ಇದ್ದ ತಮ್ಮ ಕಾಮಿಡಿ ಮತ್ತು ಪೋಷಕ ನಟ ಇಮೇಜ್ ಕಲಚಿಕೊಂಡು ಮಾಸ್ ವಿಲನ್ ಆಗಿ ಯಶಸ್ವಿಯಾದರು.

ಕನ್ನಡ 'ದುರ್ಗಿ' ಸಿನೇಮಾದಲ್ಲೂ ಕಾಣಿಸಿಕೊಂಡಿದ್ದ ಅವರು ತಮಿಳಿನ 'ಜೆಮಿನಿ' ಸೇರಿದಂತೆ ಇತರ ಸಿನೇಮಗಳ ನಟನೆಗಾಗಿ ಅನೇಕ ಪ್ರಶಸ್ತಿಗಳನ್ನು ಗಿಟ್ಟಿಸಿದರು. ಅದರಲ್ಲೂ ನಟ ಮೊಹನ್ ಲಾಲ್ ಎದುರು ವಿಲನ್ ಆಗಿ ಕಾಣಿಸಿಕೊಂಡ ಚೋಟಾ ಮುಂಬೈನ್ ನ ಪಾತ್ರು ಮಲಯಾಲಂ ಸಿನೆರಂಗದ ಇತಿಹಾಸದಲ್ಲಿ ದಿ ಬೆಸ್ಟ್ ವಿಲನ್ ರೊಲ್‌ಗಳಲ್ಲಿ ಒಂದೆನಿಸಿಕೊಂಡಿದೆ .

ನಟನೆಯ ನಡುವೆಯೂ ನಿಷ್ಣಾತ ಜಾನಪದ ಗಾಯಕರಾಗಿದ್ದ ಅವರು ಸ್ವತಃ ತಾವೇ ಹಾಡಿದ ಆಲ್ಬಂ ಅನ್ನು ಹೊರ ತಂದಿದ್ದರು. ಅವರ ಮೊದಲ ಆಲ್ಬಂ ಕನ್ನಿಮಾಂಗ ಪ್ರಯಾತ್ತಿಲ್ ಬರ್ಜರಿ ಯಶಸ್ಸು ಗಳಿಸಿತು. ಇದರ ಬೆನ್ನಲ್ಲೇ ಅನೇಕ ಭಕ್ತಿ ಪ್ರಧಾನ ಆಲ್ಬಂಗಳಲ್ಲಿ ಹಾಡಿದ ಅವರು ಸಿನೆಮಾಗಳಲ್ಲೂ ಹಿನ್ನಲೆ ಗಾಯಕರಾಗಿ ಮನೆಮಾತಾದರು. ಜತೆಗೆ ಹಲವು ಸಿನೆಮಾಗಳಿಗೆ ಸಂಗೀತ ನಿರ್ದೇಶನವನ್ನು ನೀಡಿದರು.

ತಮ್ಮ ಎರಡು ದಶಕಗಳ ಸಿನಿ ಪಯಣದಲ್ಲಿ ಅನೇಕ ಏಳು ಬೀಳುಗಳನ್ನು ಕಂಡ ಮಣಿ ಮಲಯಾಳಂ ನಿನೆಮಾಗಳ ಸುವರ್ಣ ಯುಗದ ಭಾಗ. ಮಾಲಿವುಡ್‌ನಲ್ಲಿ ಹೊಸ ಅಲೆಯ ಸಿನೆಮಾಗಳಲ್ಲಿ ಕಾಣಿಸಿಕೊಳ್ಳುವ ಮೂಲಕ ಹೊಸ ಪ್ರತಿಭೆಗಳಿಗೆ ಉತ್ತೇಜನ ನೀಡಿದರು.

ತಮ್ಮ ಜೀವಿತದ ಶೈಶವಾವಸ್ತೆಯಲ್ಲಿ ಎತ್ತರದ ಸಾಧನೆ ಮಾಡಿದ ಮಣಿ ಹಾಸ್ಯ ಕಲಾವಿದ, ಕಲಾನಟ, ನಾಯಕ ನಟ, ಗಾಯಕ, ಸಂಗೀತ ನಿರ್ದೇಶಕ, ಸಂಭಾಷನೆ, ಚಿತ್ರಗಾರನಾಗಿ ಯಶಸ್ವಿಯಾಗಿದ್ದು ಅವರ ಅಕಾಲಿಕ ಮರಣದ ನಡುವೆಯೂ ಅವರೂ ತಮ್ಮ ಸಿನೆಮಾದ ಮೂಲಕ ಜೀವಂತವಾಗಿ ತಲೆಮಾರುಗಳ ತನಕ ಉಳಿದಿದ್ದಾರೆ.

**ತೇಜಕುಮಾರ್**

# ಮಂಗಳೂರು ವಿವಿಯಲ್ಲಿ ಚಲನಚಿತ್ರೋತ್ಸವಕ್ಕೆ ಚಾಲನೆ

**ಮಂಗಳೂರು,ಎ.4:**ಮಂಗಳೂರು ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದಿಂದ ಆಯೋಜಿಸಲಾದ 3 ದಿವಸಗಳ ಚಲನಚಿತ್ರೋತ್ಸವಕ್ಕೆ ಚಲನಚಿತ್ರ ನಿರ್ದೇಶಕ ಮತ್ತು ಕಥೆಗಾರ ಶಶಿಕಾಂತ್ ಗಟ್ಟಿ ವಿ.ವಿ. ಹಳೆ ಸೆನೆಟ್ ಸಭಾಂಗಣದಲ್ಲಿ ಇತ್ತೀಚೆಗೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು,ಸಿನೆಮಾರಂಗವು ವರ್ಣಮಯ ಜಗತ್ತಾಗಿದೆ. ಸಿನೆಮಾ ನಿರ್ದೇಶಕರು ಸೃಜನಶೀಲತೆ ಹೊಂದಿರಬೇಕು. ಎಲ್ಲಾ ವಿಷಯಗಳ ಬಗ್ಗೆ ಆಳವಾಗಿ ಅಯನ ನಡೆಸಿ ಅದಕ್ಕೆ ರೂಪುರೇಷೆಯನ್ನು ನೀಡುವ ಕಲೆ ನಿರ್ದೇಶಕರಲ್ಲಿ ಕರಗತವಾಗಿರಬೇಕು. ಅದೇ ರೀತಿ ವಿಭಿನ್ನ ಶೈಲಿಯಲ್ಲಿ ಯೋಚಿಸುವವನಾಗಿರಬೇಕೆಂದು ತಿಳಿಸಿದರು.

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಪ್ರಾಧ್ಯಾಪಕ ಪ್ರೋ.ಜಿ.ಪಿ ಶಿವರಾಂ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕಾಗಿ ಚಲನಚಿತ್ರೋತ್ಸವವನ್ನು ಕಳೆದ 15 ವರ್ಷಗಳಿಂದ ನಡೆಸಲಾಗುತ್ತಿದೆ ಎಂದರು. ವಿಭಾಗದ ಮುಖ್ಯಸ್ಥೆ ಪ್ರೊ.ವಹೀದಾ ಸುಲ್ತಾನಾ ಉಪಸ್ಥಿತರಿದ್ದರು. ಕಿರಣ್ ಕಾರ್ಯಕ್ರಮ ನಿರೂಪಿಸಿದರು. ಮುಹಮ್ಮದ್ ನವಾಫ್ ವಂದಿಸಿದರು.

# ಮಂಗಳೂರು ವಿವಿಯಲ್ಲಿ ರಕ್ತದಾನ




**ಮಂಗಳುರು,ಎ.5:**ಮಂಗಳೂರು ವಿಶ್ವವಿದ್ಯಾನಿಲಯ ರಕ್ತದಾನಿಗಳ ಕೂಟ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಸ್ನಾತಕೋತ್ತರ ಪದವಿ ವಿದ್ಯಾರ್ಥಿ ಸಂಘ ಹಾಗೂ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಸಹಯೋಗದಲ್ಲಿ 4ನೇ ವರ್ಷದ ರಕ್ತದಾನ ಶಿಬಿರ ಇತ್ತೀಚೆಗೆ ವಿವಿ ಆರೋಗ್ಯ ಕೇಂದ್ರದಲ್ಲಿ ನಡೆಯಿತು.

ಭಾರತೀಯ ರೆಡ್ ಕ್ರಾಸ್‌ನ ದ.ಕ ಜಿಲ್ಲಾ ಉಪಾಧ್ಯಕ್ಷ ಡಾ.ಸುಶೀಲ್ ಜತ್ತನ್ನ ಶಿಬಿರವನ್ನುಉದ್ಘಾಟಿಸಿದರು. ಮಂಗಳುರು ವಿವಿ ರಕ್ತದಾನಿಗಳ ಗುಂಪಿನ ಸಂಯೋಜಕ ಪ್ರೋ.ಜಿ.ಪಿ,ಶಿವರಾಂ ಮಾತನಾಡಿದರು.

ಮಂಗಳೂರು ವಿವಿ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಪ್ರೋ. ವಹೀದಾ ಸುಲ್ತಾನಾ, ಲೇಡಿಗೋಶನ್ ಆಸ್ಪತ್ರೆ ವೈದ್ಯರು ಸೇರಿದಂತೆ ಹಲವು ವಿದ್ಯಾರ್ಥಿಗಳು ಈ ಸಂದರ್ಭ ಉಪಸ್ಥಿತರಿದ್ದರು.

## ಪುಸ್ತಕ ವಿಮರ್ಶೆ

# ಸಂಪ್ರದಾಯ, ಪರಂಪರೆ, ವರ್ತನೆ, ಗುಣ ಸಾಧ್ಯತೆಗಳ ದರ್ಪಣ

**ಪುಸ್ತಕದ ಹೆಸರು: 'ನೃತ್ಯ ಮಾರ್ಗ ಮುಕುರ'**
**ಲೇಖಕ: ಮನೋರಮಾ.ಬಿ.ಎನ್**
**ಬೆಲೆ: 125**
**ಪ್ರಕಟಿಸಿದ ವರ್ಷ: ಫೆಬ್ರವರಿ 13, 2011.**

ಭರತನಾಟ್ಯ – ಭರತನ ನಾಟ್ಯಶಾಸ್ತ್ರ ಪ್ರಸ್ತುತ ಸಂಧರ್ಭದಲ್ಲಿ ಗೊಂದಲವನ್ನು ಸೃಷ್ಟಿಸಿಕೊಂಡ ಪಾರಿಭಾಷಿಕ ಪದಗಳಾಗಿ ಮಾರ್ಪಟ್ಟಿವೆ. 'ಇಂದಿನ' ಭರತನಾಟ್ಯ ಎಂಬ ನೃತ್ಯಪದ್ಧತಿಗೂ 'ಅಂದಿನ' ಭರತನ ನಾಟ್ಯಶಾಸ್ತ್ರ ಗ್ರಂಥಕ್ಕೂ ಇರುವ ಸಂಬಂಧಗಳ ಬಗ್ಗೆ ಗಹನವಾದ ಚರ್ಚೆಗಳು ನಡೆಯುತ್ತಿದ್ದರೂ ತಾರ್ಕಿಕ, ತಲಸ್ಪರ್ಶಿಯಾದ ಅಧ್ಯಯನಗಳಾಗಿರುವುದು ಬೆರಳೆಣಿಕೆಯಷ್ಟು. ಈ ನಿಟ್ಟಿನಲ್ಲಿ 'ನೃತ್ಯ ಮಾರ್ಗ ಮುಕುರ' ಪುಸ್ತಕವು ಭರತನಾಟ್ಯ ನೃತ್ಯ ಮಾರ್ಗಕ್ಕೆ ಹಿಡಿದ ಕೈಗನ್ನಡಿಯೇ ಆಗಿರುವುದು.

ಈ ಪುಸ್ತಕವನ್ನು ಓದಿದಾಗ ಕಥೆ ಎನಿಸಬಹುದು. ಆದರೆ ಸ್ವಲ್ಪ ಯೋಚಿಸಿದರು ಕಥೆಯೊಳಗೆ ನಮ್ಮೆಲ್ಲಾ ಸಂಪ್ರದಾಯ, ಪರಂಪರೆ, ವರ್ತನೆ, ಗುಣ ಸಾಧ್ಯತೆಗಳ ದರ್ಪಣವಿದೆ.




ಕಲೆಯು ಬೇರೆ ಬೇರೆ ದೇಶ, ಕಾಲ, ಸಂಸ್ಕೃತಿಗಳಿಗನುಗುಣವಾಗಿ ಹಲವು ಸ್ಥಿತ್ಯಂತರಗಳಿಗೆ ಪ್ರಧಾನವಾಗಿಯೂ, ಪೋಷಕವಾಗಿಯೂ ಆಧಾರವಾಗಿಯೂ ನೆಲೆನಿಂತಿದೆ. ಭಾರತದ ಕಲೆಗಳು ಅನಾದಿ, ಅದರಲ್ಲಿ ಬದಲಾವಣೆಯೇ ಆಗಿಲ್ಲ. ಈ ನಿಟ್ಟಿನಲ್ಲಿ 'ನೃತ್ಯ ಮಾರ್ಗ ಮುಕುರವು' ಸಾಧ್ಯತೆ, ಸಂಭಾವ್ಯತೆ, ದೊರಕಿದ ಬೆಳಕಿಂಡಿಯನ್ನನುಸರಿಸಿ, ಹಾದಿಯನ್ನು ಹುಡುಕುತ್ತ ಹೋದ ಒಂದು ಪ್ರಯತ್ನ. ನಾಟ್ಯಮಾರ್ಗದ ನಿರೂಪಣೆಯು ವಿವಿದಾರ್ಥಗಳಿಗೆ ಹೇತುವಾಗಬಹುದೆಂಬ ದೂರಾಲೋಚನೆ ಹಾಗು ಭರತನಾಟ್ಯ ಪದ್ಧತಿಯ ನಿಷ್ಠ ಪಾರಂಪರಿಕರು ಕಂಡುಕೊಳ್ಳವ ದೃಷ್ಟಿಯನ್ನಾಧರಿಸಿ ಹಲವು ಬಗೆಯ ಸಂದೇಹ, ಒಡಕು, ಆರೋಪಣೆ, ಹಿತಾಶಕಿ ಮತ್ತು ಅಪಾರ್ಥಗಳ ಗೋಜಲಿಗೆ ಕಾರಣವಾಗಬಹುದೆಂಬ ನಿಟ್ಟಿನಲ್ಲಿ ಭರತನಾಟ್ಯ ಹುಟ್ಟಿರಬಹುದಾದ ಸಂದರ್ಭಗಳನ್ನು ಮಾತ್ರ ಈ ಪುಸ್ತಕದಲ್ಲಿ ಕೈಗೆತ್ತಿಕೊಳ್ಳಲಾಗಿರುವುದನ್ನು ಕಾಣಬಹುದು.

ಈ ಹಿನ್ನಲೆಯಲ್ಲಿ ಭರತನಾಟ್ಯದ ಮಾರ್ಗಸಂಭವಕ್ಕೆ ಆಗಿರಬಹುದಾದ ಒಂದಷ್ಟು ಇತಿಹಾಸ ಮತ್ತು ತಾರ್ಕಿಕ ಮಾನದಂಡಗಳನ್ನು ಆಧಾರ, ಪ್ರಸ್ತುತತೆಯ ದೃಷ್ಟಿಯಿಂದ ಮುಂದಿಡಲಾಗಿದೆ. ಕಪೋಲಕಲ್ಪಿತ, ನಿರಾಧಾರ ಸಂಗತಿಗಳನ್ನು ಮತ್ತು ಈಗಾಗಲೇ ಹಿರಿಯರು ಕಂಡುಕೊಳ್ಳಲಾದ ವೈಯಕ್ತಿಕ ನಿರೂಪಣೆ ವ್ಯಾಖ್ಯಾನಗಳನ್ನು ಬಳಸಿಕೊಂಡೆ, ಈ ಒಂದು ಪುಸ್ತಕದಲ್ಲಿ ಸಮಂಜಸವಾಗಿ ವಿವರಿಸಲಾಗಿದೆ. ಮೂರು ವರ್ಷಗಳ ಹಿಂದೆ ನೂಪುರ ಭ್ರಮರಿಯ ಮೂಲಕ ಪ್ರಾರಂಭವಾದ ಭರತನಾಟ್ಯದ ನರ್ತನಾಂಗಗಳ ಆಯಾಮಗಳನ್ನು ಅವಲೋಕಿಸುವ ಅಭಿನಯವು ಇಂದಿಗೆ 'ನೃತ್ಯ ಮಾರ್ಗ ಮುಕುರವೆಂಬುದಾಗಿ ಈ ಪುಸ್ತಕವು ರೂಪವನ್ನು ಪಡೆದಿರುವುದು. ಓದುಗರ ಮನಸ್ಸುಗಳ ಅರಿವು–ಹರಿವಿಗೆ, ಚರ್ಚೆಗೆ ಬಿಟ್ಟ ವಿಷಯವಾಗಿ ಕಂಡುಬರುತ್ತದೆ.

**ವಿದ್ಯಾರ್ಥಿ ಸಂಪಾದಕರು**
ವಿನೋದ್ ರಾಜ್. ಕೆ,
ಅನುಶ್ರೀ.ಕೆ.ಕೆ,
ಕಾವ್ಯ,
ತೇಜಕುಮಾರ್,
ಮಾಂತೇಶ್ ಹಿರೇಮಠ್,